# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಏಪ್ರಿಲ್ 05, 2023

ಸಂಪುಟ : 49 ಸಂಚಿಕೆ : 322 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com






## ವಿಜೃಂಭಣೆಯಿಂದ ನಡೆದ ಮಹಾವೀರ ತೀರ್ಥಂಕರ ಜನ್ಮ ಕಲ್ಯಾಣ ಮಹೋತ್ಸವ

ದಾವಣಗೆರೆ, ಏ.4- ನಗರದ ಎನ್.ಆರ್. ರಸ್ತೆಯ ಪಾರ್ಶ್ವನಾಥ ಜೈನ ದಿಗಂಬರ ಮಂದಿರದಲ್ಲಿ ಇಂದು ಜೈನ ಧರ್ಮದ 24ನೇ ತೀರ್ಥಂಕರ ಭಗವಾನ್ ಮಹಾವೀರ ಸ್ವಾಮಿಯ 2622ನೇ ಜನ್ಮ ಕಲ್ಯಾಣ ಮಹೋತ್ಸವವನ್ನು ಆಚರಿಸಲಾಯಿತು

ಮುಂಜಾನೆ ಜಿನಮಂದಿರದಲ್ಲಿ ಮಹಾವೀರ ತೀರ್ಥಂಕರರಿಗೆ 108 ಕಲಶ ಅಭಿಷೇಕ, ಗಂಧಾಭಿಷೇಕ, ಕ್ಷೀರಾಭಿಷೇಕ, ಕಬ್ಬಿನ ಹಾಲಿನ ಅಭಿಷೇಕ, ಎಳನೀರು ಅಭಿಷೇಕ, ಮಾವಿನ ಹಣ್ಣಿನ ಅಭಿಷೇಕ, ಕಳಸ ಅಭಿಷೇಕ ಮಾಡಲಾಯಿತು.

ಮಹಾವೀರಸ್ವಾಮಿಯ ಭವ್ಯ ಮೆರವಣಿಗೆಯನ್ನು ದಿಗಂಬರ ಜೈನ ಸಮಾಜ ಹಾಗೂ ಶ್ವೇತಂಬರ ಜೈನ ಸಮಾಜವೂ ಜಂಟಿಯಾಗಿ ಪಾರ್ಶ್ವನಾಥ ಜೈನ ದಿಗಂಬರ ಮಂದಿರದಿಂದ ವಿವಿಧ ಕಲಾತಂಡಗಳಿಂದ ನರಸರಾಜ ರಸ್ತೆ, ಮಂಡಿಪೇಟೆ ಗಡಿಯಾರ ಕಂಬ ರಸ್ತೆ ವಿಜಯಲಕ್ಷ್ಮಿ ರಸ್ತೆ ಹಾಸಬಾವಿ ಸರ್ಕಲ್ ಮುಖಾಂತರ ಜಿನಮಂದಿರ ತಲುಪಿತು. ಮಧ್ಯಾಹ್ನ ದಿಗಂಬರ ಜೈನ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಂಜೆ ಪದ್ಮಾಂಬ ಮಹಿಳಾ ಸಮಾಜದ ವತಿಯಿಂದ ಭಗವಾನ್ ಮಹಾವೀರ ತೀರ್ಥಂಕರ ಬಾಲ ಲೀಲೋತ್ಸವ, ತೊಟ್ಟಿಲು ನಾಮಕರಣ ಕಾರ್ಯಕ್ರಮ ನೆರವೇರಿದವು. ಈ ಸಂದರ್ಭದಲ್ಲಿ ಮಹಾವೀರ್ ಯುವ ಮಂಚ್, ಪಾರ್ಶ್ವನಾಥ ಟೆಂಪಲ್ ಟ್ರಸ್ಟ್ , ಮಹಾವೀರ್ ಸಂಘ, ಪದ್ಮಾಂಬ ಮಹಿಳಾ ಸಂಘದ ಪದಾಧಿಕಾರಿಗಳು ಇದ್ದರು.

## ನ್ಯಾಯದ ವಿಷಯದಲ್ಲಿ ಕರ್ನಾಟಕ ಮೊದಲು

ನವದೆಹಲಿ, ಏ. 4- ನ್ಯಾಯ ಪಡೆಯುವುದಕ್ಕೆ ಸಂಬಂಧಿಸಿದಂತೆ ರೂಪಿಸಿದ ವರದಿಯಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ಇಂಡಿಯಾ ಜಸ್ಟೀಸ್ ರಿಪೋರ್ಟ್ 2022 (ಐ.ಜೆ.ಆರ್.) ವರದಿಯನ್ನು ಮಂಗಳವಾರ ಬಿಡುಗಡೆ ಮಾಡಲಾಗಿದೆ. ಟಾಟಾ ಟ್ರಸ್ಟ್ ಸಂಸ್ಥೆಯು 2019ರಲ್ಲಿ ಐ.ಜೆ.ಆರ್. ಸ್ಥಾಪಿಸಿತ್ತು.

**ಇಂಡಿಯಾ ಜಸ್ಟೀಸ್ ರಿಪೋರ್ಟ್ 2022ರ ವರದಿ**

ಈ ಸಂಸ್ಥೆಯ ವರದಿಯ ಪ್ರಕಾರ ದೆಹಲಿ ಹಾಗೂ ಚಂಡೀಘಡ ಹೊರತು ಪಡಿಸಿ ಯಾವುದೇ ರಾಜ್ಯ ಇಲ್ಲವೇ ಕೇಂದ್ರಾಡಳಿತ ಪ್ರದೇಶ ತನ್ನ ವಾರ್ಷಿಕ ವೆಚ್ಚದ ಶೇ.1ಕ್ಕೂ ಹೆಚ್ಚಿನ ಭಾಗವನ್ನು ನ್ಯಾಯಾಂಗಕ್ಕೆ ವಿನಿಯೋಗಿಸಿಲ್ಲ. ದೇಶದ ವಿವಿಧ ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಗಳ ಶೇ.30ರಷ್ಟು ಸ್ಥಾನಗಳು ಖಾಲಿ ಇವೆ.

ದೇಶದ ಪ್ರತಿ 10 ಲಕ್ಷ ಜನಸಂಖ್ಯೆಗೆ 19 ನ್ಯಾಯಮೂರ್ತಿಗಳಿದ್ದಾರೆ. 4.8 ಕೋಟಿ ಪ್ರಕರಣಗಳು ಬಾಕಿ ಇವೆ. ಪ್ರತಿ ಹತ್ತು ಲಕ್ಷ ಜನಸಂಖ್ಯೆಗೆ 50 ನ್ಯಾಯಮೂರ್ತಿಗಳು ಇರಬೇಕು ಎಂದು 1987ರಲ್ಲಿ ಕಾನೂನು ಆಯೋಗ ವರದಿ ನೀಡಿತ್ತು.

ನ್ಯಾಯಾಂಗದಲ್ಲಿ ಖಾಲಿ ಇರುವ ಹುದ್ದೆಗಳು, ಬಜೆಟ್ ಅನುದಾನ, ಮೂಲಭೂತ ಸೌಲಭ್ಯ, ಮಾನವ ಸಂಪನ್ಮೂಲ, ಕಾನೂನು ನೆರವು, ಬಂಧೀಖಾನೆಗಳ ಸ್ಥಿತಿ, ಪೊಲೀಸ್ ಕಾರ್ಯನಿರ್ವಹಣೆ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗ ಸೇರಿದಂತೆ, ಹಲವು ವಿಷಯಗಳನ್ನು ಆಧರಿಸಿ ಶ್ರೇಯಾಂಕ ರೂಪಿಸಲಾಗಿದೆ. ಈ ಶ್ರೇಯಾಂಕದ ಪ್ರಕಾರ ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ 18 ದೊಡ್ಡ ಹಾಗೂ ಮಧ್ಯಮ ಗಾತ್ರದ (2ನೇ ಪುಟಕ್ಕೆ)

## ಬಿಜೆಪಿ ಆರೋಪ ಪ್ರಶ್ನಿಸಿದ್ದಕ್ಕೆ ರಾಹುಲ್ ಗಾಂಧಿ ಕಿಡಿ



ನವದೆಹಲಿ, ಏ. 4 – 'ನೀವೇಕೆ ಸದಾ ಬಿಜೆಪಿ ಆಡುವ ಮಾತುಗಳನ್ನೇ ಆಡುತ್ತೀರಿ' ಎಂದು ತಮ್ಮನ್ನು ಪ್ರಶ್ನಿಸಿದ ಪತ್ರಕರ್ತರ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಿಡಿ ಕಾರಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೂರತ್ ನ್ಯಾಯಾಲಯ ದಲ್ಲಿ ಅರ್ಜಿ ದಾಖಲಿಸುವಾಗ ದೊಡ್ಡ ಸಂಖ್ಯೆಯಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಇದು ನ್ಯಾಯಾಂಗದ ಮೇಲೆ ಒತ್ತಡ ಹೇರುವ ಪ್ರಯತ್ನ ಎಂದು ಬಿಜೆಪಿ ಆರೋಪಿಸಿತ್ತು.

ಕಾಂಗ್ರೆಸ್ ಕೇಂದ್ರ ಕಚೇರಿಗೆ ತೆರಳುತ್ತಿದ್ದ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ ಪತ್ರಕರ್ತರು, ಬಿಜೆಪಿ ಆರೋಪದ ಬಗ್ಗೆ ಪ್ರಶ್ನಿಸಿದರು.

ಆಗ ಉತ್ತರಿಸಿದ ರಾಹುಲ್ ಗಾಂಧಿ, 'ನೀವೇಕೆ ಸದಾ ಬಿಜೆಪಿ ಆಡುವ ಮಾತುಗಳನ್ನೇ ಆಡುತ್ತೀರಿ? ಬಿಜೆಪಿ ಹೇಳುವುದನ್ನೇ ಪ್ರತಿ ಬಾರಿ ನೀವು ಹೇಳುತ್ತೀರಿ' ಎಂದರು. ಗೌತಮ್ ಅದಾನಿ ಅವರ ಶೆಲ್ ಕಂಪನಿಗಳಲ್ಲಿರುವ 20 ಸಾವಿರ ಕೋಟಿ ರೂ.ಗಳು ಯಾರದ್ದು? ಇದು ಬೇನಾಮಿ ಹಣ. ಇದರ ಮಾಲೀಕರು ಯಾರು? (2ನೇ ಪುಟಕ್ಕೆ)

## ಕುಟುಂಬದ ಜೊತೆ ದೇಶಕ್ಕೂ ಕೊಡುಗೆ ನೀಡುವ ಮಹಿಳೆ

ದಾವಣಗೆರೆ, ಏ.4- ಒಬ್ಬ ವಿದ್ಯಾವಂತ ಮಹಿಳೆ ಇಡೀ ಕುಟುಂಬವನ್ನು ಪ್ರಗತಿಯತ್ತ ಕೊಂಡೊಯ್ಯಬಲ್ಲಳು ಎಂದು ಬಾಪೂಜಿ ವಿದ್ಯಾ ಸಂಸ್ಥೆ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅಭಿಪ್ರಾಯ ಪಟ್ಟರು.

ಮಂಗಳವಾರ ನಗರದ ಶ್ರೀ ಡಾ. ಸದ್ಯೋಜಾತ ಶಿವಾಚಾರ್ಯ ಹಿರೇಮಠದಲ್ಲಿ ಇಂದು ಏರ್ಪಡಾಗಿದ್ದ ಜೇನುಗೂಡು ಮಹಿಳಾ ಸಮಾಜದ ಮೂರನೇ ವಾರ್ಷಿಕೋತ್ಸವ ಸಮಾರಂಭ ಉದ್ದೇಶಿಸಿ ಅವರು ಮಾತನಾಡಿದರು.

ಮಹಿಳೆಯರು ಪ್ರತಿ ಕುಟುಂಬದ ಆಚಾರ-ವಿಚಾರ, ಮಕ್ಕಳ ವಿದ್ಯಾಭ್ಯಾಸ, ಸದಸ್ಯರ ಆರೋಗ್ಯ ಸೇರಿದಂತೆ ಅನೇಕ ಅಂಶಗಳ ಕುರಿತು ಆಲೋಚಿಸುವ ಮುಖಾಂತರ ಸಮಾಜ ಹಾಗೂ ದೇಶಕ್ಕೆ ತಮ್ಮದೇ ಕೊಡುಗೆ ನೀಡುತ್ತಿದ್ದಾರೆ. ಪೋಷಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ, ಶಾಲೆಯಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಉತ್ತೇಜನ ನೀಡಬೇಕು. ಮಕ್ಕಳಲ್ಲಿ ಹೆಣ್ಣು-ಗಂಡು ಎಂಬ ಭೇದ ಭಾವ ಮಾಡದೆ ಸಮಾನ ದೃಷ್ಟಿಕೋನದಲ್ಲಿ ಬೆಳೆಸಬೇಕು ಎಂದರು.

ಪೋಷಕರು ಕುಟುಂಬಕ್ಕಾಗಿ ಸಮಯ



ಮೀಸಲಿರಿಸಿ ಮಕ್ಕಳೊಂದಿಗೆ ಹೆಚ್ಚಾಗಿ ಕಳೆಯಬೇಕು. ಮೊಬೈಲ್, ಟಿವಿಗೆ ಆದ್ಯತೆ ನೀಡದೆ ಸಂಪೂರ್ಣ ಸಮಯವನ್ನು ಕುಟುಂಬಕ್ಕಾಗಿಯೇ ವ್ಯಯ ಮಾಡಬೇಕು. ಏಕೆಂದರೆ, ಮಕ್ಕಳು ಬಾಲ್ಯದಲ್ಲಿ ಕಳೆಯುವ ಕ್ಷಣಗಳನ್ನು ತಮ್ಮ ಮುಂದಿನ ಪೀಳಿಗೆಯೊಂದಿಗೆ ಹಂಚಿಕೊಳ್ಳಲು ಸಹಕಾರಿಯಾಗಲಿವೆ ಎಂದ ಅವರು, ಸಮಾಜವೆಂದರೆ ಎಲ್ಲರ ಒಳಗೊಳ್ಳುವಿಕೆಯಾಗಿದೆ. ಜೇನುಗೂಡು ಸಮಾಜವು ನಿಸ್ವಾರ್ಥ ಸೇವೆ

**ಜೇನುಗೂಡು ಮಹಿಳಾ ಸಮಾಜದ ವಾರ್ಷಿಕೋತ್ಸವದಲ್ಲಿ ಡಾ.ಪ್ರಭಾ ಮಲ್ಲಿಕಾರ್ಜುನ್**

ಮಾಡುತ್ತಿದ್ದು, ಅನೇಕ ಒತ್ತಡಗಳ ನಡುವೆಯೂ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಶ್ರೀ ಸಾಮಾನ್ಯನಿಗೆ ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ವೆಚ್ಚವನ್ನು ಭರಿಸುವುದು ಕಷ್ಟಕರವಾಗಿದ್ದು, ಎಸ್.ಎಸ್ ಕೇರ್ ಟ್ರಸ್ಟ್ ವತಿಯಿಂದ ಗರ್ಭಿಣಿ ಸ್ತ್ರೀಯರಿಗೆ, ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ, ಸ್ತನ ಕ್ಯಾನ್ಸರ್, ಕಣ್ಣಿನ ಚಿಕಿತ್ಸೆ, ಡಯಾಲಿಸಿಸ್ ಹಾಗೂ ಇನ್ನಿತರೆ ಶಸ್ತ್ರ ಚಿಕಿತ್ಸೆ ಅವಶ್ಯವಿರುವವರಿಗೆ ಆರೋಗ್ಯ ಮಾಹಿತಿ ಹಾಗೂ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದ್ದು, ಅಗ್ಯವಿರುವವರು ಸೌಲಭ್ಯ ಬಳಸಿಕೊಳ್ಳಬಹುದಾಗಿದೆ ಎಂದರು.


ಜೇನುಗೂಡು ಮಹಿಳಾ ಸಮಾಜದ ಕಾರ್ಯದರ್ಶಿ ಮಧು ಉಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರೇಖಾ ಸಿದ್ದಲಿಂಗಪ್ಪ ಸಂಸ್ಥೆಯ ವಾರ್ಷಿಕ ವರದಿ ಮಂಡನೆ ಮಾಡಿದರು.

ಕಾರ್ಯಕ್ರಮದಲ್ಲಿ ಜೇನುಗೂಡು ಸಂಸ್ಥೆಯ ಸುಜಾತ ನಾಗೇಶ್ ಅಧ್ಯಕ್ಷತೆ ವಹಿಸಿದ್ದರು, ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮೀನಾಕ್ಷಿ ವೆಂಕಟೇಶ್, ಲತಿಕಾ ದಿನೇಶ್ ಶೆಟ್ಟಿ, ಬ್ರಾಹ್ಮಣ ಸಮಾಜದ ಅಧ್ಯಕ್ಷೆ ನಳಿನಿ ಅಚ್ಯುತ್, ವಿದ್ಯಾ ಭಾಸ್ಕರ್, ಕೊಟ್ರಮ್ಮ ಮುರುಗೇಶ್, ರೂಪ ಚನ್ನವೀರಸ್ವಾಮಿ, ವಿಜಯ ವೀರೇಂದ್ರ ಮತ್ತಿತರರಿದ್ದರು.

## ಹೈಕೋರ್ಟ್‌ಗಳಲ್ಲಿ ಶೇ.13ರಷ್ಟು ಮಾತ್ರ ಮಹಿಳೆಯರು

ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹಿಳಾ ನ್ಯಾಯಮೂರ್ತಿಗಳ ಕೊರತೆ ಇದೆ ಎಂದು ಐ.ಜೆ.ಆರ್. ವರದಿಯಲ್ಲಿ ತಿಳಿಸಲಾಗಿದೆ. ವರದಿಯ ಪ್ರಕಾರ ಹೈಕೋರ್ಟ್‌ನಲ್ಲಿ ಶೇ.13ರಷ್ಟು ಮಾತ್ರ ಮಹಿಳಾ ನ್ಯಾಯಮೂರ್ತಿಗಳಿದ್ದಾರೆ. ಅಧೀನ ನ್ಯಾಯಾಲಯಗಳಲ್ಲಿ ಶೇ.35 ರಷ್ಟು ಮಹಿಳಾ ನ್ಯಾಯ ಮೂರ್ತಿಗಳಿದ್ದಾರೆ. ಬಂಧೀಖಾನೆಯ ಶೇ.13ರಷ್ಟು ಸಿಬ್ಬಂದಿ ಮಾತ್ರ ಮಹಿಳೆಯರು. ಪೊಲೀಸ್ ಅಧಿಕಾರಿಗಳ ಹುದ್ದೆಗಳಲ್ಲಿ ಶೇ.8ರಷ್ಟು ಮಾತ್ರ ಮಹಿಳೆಯರಿದ್ದಾರೆ. ಬಹುತೇಕ ರಾಜ್ಯಗಳಲ್ಲಿ ಮಹಿ ಳಾ ವಕೀಲರ ಸಂಖ್ಯೆ ಹೆಚ್ಚಾಗುತ್ತಿದೆ. ಪ್ರಸಕ್ತ ಮಹಿಳಾ ವಕೀಲರ ಪ್ರಮಾಣ ಶೇ.25ಕ್ಕೆ ತಲುಪಿದೆ.

## ಅಮೆರಿಕದ ಮಾಜಿ ಅಧ್ಯಕ್ಷ ಟ್ರಂಪ್ ಬಂಧನ



ವಾಷಿಂಗ್ಟನ್, ಏ. 4 – ನೀಲಿ ಚಿತ್ರಗಳ ನಟಿ ಸ್ಟಾರ್ಮಿ ಡೇನಿಯಲ್ಸ್ ಜೊತೆಗಿನ ಸಂಬಂಧ ಮುಚ್ಚಿಡಲು 1.30 ಲಕ್ಷ ಡಾಲರ್ ಹಣ ನೀಡಿದ ಆರೋಪದ ಮೇಲೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಂಧಿಸಲಾಗಿದೆ. (2ನೇ ಪುಟಕ್ಕೆ)


CET, NEET
Crash Course
50 Days, 20 Test
Limited Seats
Fee 7500/- only
Winners Career Academy
# 304, 2nd Main, P.J. Extension, Near Stadium, Davanagere.
9886997892, 9148596892


## ಲಿಂಗಾಯತ ಶಾಸಕರು ಹೆಚ್ಚು ಬಹುಮತ ನೀಡಿದರೆ ಲಿಂಗಾಯತ ಸಿಎಂ: ಎಸ್ಸೆಸ್



ದಾವಣಗೆರೆ, ಏ.4- ಪ್ರಸ್ತುತ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಲಿಂಗಾಯತ ಶಾಸಕರು ಹೆಚ್ಚು ಆಯ್ಕೆಯಾಗಿ ಬಹುಮತ ನೀಡಿದರೆ ಲಿಂಗಾಯತರೇ ಮುಖ್ಯಮಂತ್ರಿಯಾಗುತ್ತಾರೆ. ಇಲ್ಲದಿದ್ದರೆ ಬೇರೆಯವರಾಗುತ್ತಾರೆ ಎಂದು ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಹಾಗು ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಸೋಮವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 60 ರಿಂದ 70 ಲಿಂಗಾಯತ ಅಭ್ಯರ್ಥಿಗಳಿಗೆ ಟಿಕೆಟ್ ಕೊಡಿ ಎಂದು ಕೇಳಿದ್ದೆ. ಕೊಟ್ಟರೆ ಗೆಲ್ಲುತ್ತಾರೆ ಎಂದರು.

ದಾವಣಗೆರೆ ಉತ್ತರ ಹಾಗೂ ದಕ್ಷಿಣ ಕ್ಷೇತ್ರದಲ್ಲಿ ನಮ್ಮ ವಿರುದ್ಧ ಯಾರಾದರೂ ಸ್ಪರ್ಧಿಸಲಿ ಹೆದರಿಕೆ ಇಲ್ಲ. ಯಾರು ಬಂದರೂ ಸೋಲುವುದು ನಿಶ್ಚಿತ ಎಂದು ಎಸ್ಸೆಸ್ ಹೇಳಿದರು. ಸಿದ್ಧರಾಮಯ್ಯ ಮುಂದಿನ ಮುಖ್ಯಮಂತ್ರಿ ಎಂದು ಕೆಲವರು ಹೇಳುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಎಸ್ಸೆಸ್, ಚುನಾವಣೆಯಲ್ಲಿ ಗೆದ್ದಾದ ಮೇಲೆ ಶಾಸಕರು ಯಾರಿಗೆ ಬಹುಮತ ನೀಡುತ್ತಾರೋ ಅವರು (2ನೇ ಪುಟಕ್ಕೆ)

## ಮೋದಿ ಸರ್ಕಾರಕ್ಕೆ ಒಂಭತ್ತು ವರ್ಷ

ನವದೆಹಲಿ, ಏ. 4 – ಕೇಂದ್ರದ ಮೋದಿ ಸರ್ಕಾರಕ್ಕೆ ಒಂಭತ್ತು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಬಡವರ ಪರ ಜಾರಿಗೆ ತರಲಾದ ಹಲವಾರು ಯೋಜನೆಗಳ ಪರಿಣಾಮಗಳನ್ನು ಪ್ರಮುಖವಾಗಿ ಬಿಂಬಿಸಲು ಯೋಜಿಸಲಾಗಿದೆ.

ಜನಕಲ್ಯಾಣ ಯೋಜನೆಗಳಿಂದ ಮೇಲ್ನೋಟಕ್ಕೆ ಕಂಡು ಬರುವಂತೆ ಆಗಿರುವ ಪರಿಣಾಮಗಳನ್ನು ದಾಟಿ ಪರೋಕ್ಷವಾಗಿ ಆಗಿರುವ ಪರಿಣಾಮಗಳನ್ನು ಪ್ರಮುಖವಾಗಿ ಬಿಂಬಿಸಲಾಗುವುದು. ಇದನ್ನು 2ನೇ ಹಂತದ ಪರಿಣಾಮ ಎಂದು ಪ್ರಚಾರ ಮಾಡಲು ನಿರ್ಧರಿಸಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ದೇಶಾದ್ಯಂತ ಇರುವ ಜನರ



**ಎರಡನೇ ಹಂತದ ಪರಿಣಾಮ ಪ್ರಚಾರಕ್ಕೆ ನಿರ್ಧಾರ**

ಜೀವನದ ಮೇಲೆ ಪರಿಣಾಮ ಬೀರಿರುವ ಹಾಗೂ ಜೀವನ ಮಟ್ಟ ಸುಧಾರಣೆಗೆ ಕಾರಣವಾಗಿರುವ ಯೋಜನೆಗಳ ಬಗ್ಗೆ ಗಮನ ಕೇಂದ್ರೀಕರಿಸಲಾಗುವುದು ಎಂದು ಮೂಲಗಳು ಹೇಳಿವೆ.

2024ರ ಲೋಕಸಭಾ ಚುನಾವಣಾ ಪ್ರಚಾರಕ್ಕಾಗಿ ಈಗಾಗಲೇ ನೀಲನಕ್ಷೆ ಸಿದ್ಧಪಡಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಪ್ರಚಾರ ಕ್ರಮ ಪ್ರಾಮುಖ್ಯತೆ ಪಡೆದುಕೊಳ್ಳಲಿದೆ.

ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಮೂಲಕ ಬಡವರಿಗೆ ಉಚಿತವಾಗಿ ಅಡುಗೆ ಅನಿಲ ಸಂಪರ್ಕ ಕಲ್ಪಿಸಲಾಗಿತ್ತು. ಇದು ಕೋಟ್ಯಂತರ ಮಹಿಳೆಯರಿಗೆ ನೆರವಾಗಿತ್ತು. ಇದರಿಂದಾಗಿ ಹೊಗೆಯಿಂದ ಮುಕ್ತಿ ಸಿಗುವ ಜೊತೆಗೆ ಸುರಕ್ಷಿತ ಇಂಧನವೂ ದೊರೆತಿತ್ತು. ಈಗ (2ನೇ ಪುಟಕ್ಕೆ)

## ಒಳಮೀಸಲಾತಿ ವಿರೋಧಿಸಿ ಬಂಜಾರ ಸ್ವಾಮೀಜಿ ಆತ್ಮಹತ್ಯೆಗೆ ಯತ್ನ

ಹಾವೇರಿ, ಏ. 4 – ಒಳಮೀಸಲಾತಿಯನ್ನು ವಿರೋಧಿಸಿ ಬಂಜಾರ ಸಮುದಾಯದ ಸ್ವಾಮೀಜಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಶಿಗ್ಗಾಂವ್‌ನಲ್ಲಿ ನಡೆದಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸ್ವಕ್ಷೇತ್ರವಾದ ಶಿಗ್ಗಾಂವ್‌ನಲ್ಲಿ ತಹಶೀಲ್ದಾರ್ ಕಚೇರಿ ಎದುರಿನ ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಗುಂಡೂರಿನ ಶ್ರೀ ತಿಪ್ಪೇಶ್ವರ ಸ್ವಾಮೀಜಿ ಅವರು ಆತ್ಮಹತ್ಯೆಗೆ ಯತ್ನ ನಡೆಸಿದ್ದಾರೆ.


ಒಳ ಮೀಸಲಾತಿ ವಿರುದ್ಧ ನಗರದಲ್ಲಿ ಬಂಜಾರ ಸಮುದಾಯದ ವತಿಯಿಂದ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಸ್ವಾಮೀಜಿ, ಹಿಂದಿನ ವ್ಯವಸ್ಥೆಯಲ್ಲಿ ಸಮುದಾಯಕ್ಕೆ ಹೆಚ್ಚು ಅವಕಾಶ (2ನೇ ಪುಟಕ್ಕೆ)

## ಸಾಮಾಜಿಕ ಜಾಲತಾಣಗಳ ವೆಚ್ಚಕ್ಕೆ ಬೀಳುವುದೇ ಕಡಿವಾಣ?

ದಾವಣಗೆರೆ, ಏ. 4 - ಅಂತರ್ಜಾಲ ಜೀವನದ ಅವಿಭಾಜ್ಯ ಅಂಗವಾಗುತ್ತಿರುವ ರೀತಿಯಲ್ಲೇ, ಅಂತರ್ಜಾಲ ಜಾಲಾಡದೇ ಚುನಾವಣೆ ಎದುರಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ. ಆದರೆ, ಸಾಂಪ್ರದಾಯಿಕ ಮಾಧ್ಯಮಗಳ ವೆಚ್ಚ ಹಾಗೂ ಬಳಕೆ ನಿರ್ಬಂಧಿಸುವ ಮಾದರಿಯಲ್ಲೇ ಸಾಮಾಜಿಕ ಜಾಲತಾಣಗಳ ಮೇಲೂ ಕಡಿವಾಣ ಇದೆಯೇ?

ಚುನಾವಣಾ ಆಯೋಗ ಜಾರಿಗೆ ತಂದಿರುವ ಮಾದರಿ ನೀತಿ ಸಂಹಿತೆಯ ಪ್ರಕಾರ ಅಭ್ಯರ್ಥಿಗಳು ಹಾಗೂ ಪಕ್ಷಗಳ ಸಾಮಾಜಿಕ ಜಾಲತಾಣಗಳ ಪ್ರಚಾರ ವೆಚ್ಚವನ್ನು ಅಧಿಕಾರಿಗಳು ಪರಿಗಣಿಸಬೇಕಿದೆ. ಆದರೆ, ಇವರನ್ನು ಹೊರತಾಗಿ ಖಾಸಗಿ ವ್ಯಕ್ತಿಗಳು ಪ್ರಕಟಿಸುವ ಅಂಶಗಳು ವೆಚ್ಚದ ವ್ಯಾಪ್ತಿಗೆ ಬರುವುದಿಲ್ಲ.

ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳು ಜಾಲತಾಣಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಮಾಡುವ ಪ್ರಚಾರದ ಮೇಲೆ ನಿಗಾ ವಹಿಸಲು ಸಾಮಾಜಿಕ ಮಾಧ್ಯಮ ಸೆಲ್‌ಗಳನ್ನು ರೂಪಿಸಲಾಗಿದೆ. ನಿಯಮಿತವಾಗಿ ಇವುಗಳು ಚುನಾವಣಾ ಆಯೋಗಕ್ಕೆ



ವರದಿ ಸಲ್ಲಿಸುತ್ತವೆ.

ಆದರೆ, ಪಕ್ಷಗಳು ಹಾಗೂ ಅಭ್ಯರ್ಥಿಗಳ ಹೊರತಾಗಿ ಬೇರೆಯವರು ಸ್ವಂತ ಖಾತೆಗಳಲ್ಲಿ ನೀಡಲಾಗುವ ಮೆಸೇಜ್, ಫೋಟೋ, ಟಿಪ್ಪಣಿ, ವಿಡಿಯೋ, ಬ್ಲಾಗ್‌ಗಳನ್ನು ರಾಜಕೀಯ ಜಾಹೀರಾತು ಎಂದು ಪರಿಗಣಿಸಲಾಗುವುದಿಲ್ಲ ಹಾಗೂ ಅವುಗಳಿಗೆ ಪೂರ್ವಾನುಮತಿಯ ಅಗತ್ಯವೂ ಇಲ್ಲ ಎಂದು ಚುನಾವಣಾ ಆಯೋಗದ ವೆಬ್ ತಾಣದಲ್ಲಿ ಮಾಹಿತಿ ನೀಡಲಾಗಿದೆ.

ಖಾಸಗಿಯವರು ಪ್ರಕಟಿಸಿದ ಮಾಹಿತಿಯನ್ನು ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳು ಮರು ಪ್ರಸಾರ ಮಾಡಿದರೂ ಅದನ್ನು ವೆಚ್ಚಕ್ಕೆ ಪರಿಗಣಿಸುವಂತಿಲ್ಲ ಎಂದು ಚುನಾವಣಾ ಆಯೋಗ ತಿಳಿಸಿದೆ.

ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳ ಹೊರತಾಗಿ ಉಳಿದವರು ಜಾಲತಾಣಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವು ಕೇಂದ್ರ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಸಚಿವಾಲಯದ ಜೊತೆ ಚರ್ಚೆ ನಡೆಸುತ್ತಿದೆ. ಮಾಹಿತಿ ತಂತ್ರಜ್ಞಾನ ಭಾರತದಲ್ಲಿ ಎಷ್ಟೆಲ್ಲ ವ್ಯಾಪಕವಾಗುತ್ತಿದ್ದರೂ, ವೆಚ್ಚದ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲದಿರುವುದು ಕೊರತೆಯೇ ಸರಿ.

ಆದರೆ, ಖಾಸಗಿಯವರು ಚುನಾವಣೆ ಬಗ್ಗೆ ಪ್ರಕಟಿಸುವ ಮಾಹಿತಿ ಚುನಾವಣಾ ವೆಚ್ಚದ ಮಿತಿಗೆ ಬರುವ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲದಿದ್ದರೂ ಸಹ, ರಾಜಕೀಯ ಪ್ರೇರಿತ ಹಾಗೂ ಪ್ರಚೋದನಕಾರಿ ಮಾಹಿತಿ ಹಂಚಿಕೊಳ್ಳುವ ವಿಷಯದಲ್ಲಿ ಮಾತ್ರ ಜನಸಾಮಾನ್ಯರು ಎಚ್ಚರಿಕೆ ವಹಿಸಲೇ ಬೇಕಿದೆ.

ಈ ರೀತಿಯ ಹೇಳಿಕೆಗಳನ್ನು ಪ್ರಕಟವಾದರೆ ಅಡ್ಮಿನ್ ಮೊದಲ ಹೊಣೆಗಾರರಾಗುತ್ತಾರೆ. ಈ (2ನೇ ಪುಟಕ್ಕೆ)

### ಇನ್ನಷ್ಟು ಗಂಭೀರ ನಿಗಾದ ಅಗತ್ಯ

**ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳ ಅಧಿಕೃತ ಜಾಲತಾಣ ಖಾತೆಗಳು ಹಾಗೂ ವೆಬ್‌ಸೈಟ್‌ಗಳ ಮೇಲಷ್ಟೇ ನಿಗಾ ವಹಿಸಿದರೆ ಸಾಲದು, ಜಾಲತಾಣಗಳ ಸಮಗ್ರ ಬಳಕೆ ಬಗ್ಗೆಯೇ ನೀತಿ ರೂಪಿಸುವ ಅಗತ್ಯವಿದೆ.**

**ಸಾಮಾಜಿಕ ಜಾಲತಾಣಗಳ ದುರ್ಬಳಕೆ ಕುರಿತು 2019ರಲ್ಲಿ ನಡೆದ ಫೇಸ್‌ಬುಕ್ - ಕೇಂಬ್ರಿಡ್ಜ್ ಅನಲಿಟಿಕಾ ಹಗರಣ ಬೆಳಕು ಚೆಲ್ಲಿತ್ತು. 'ದಿಸ್ ಈಸ್ ಯುವರ್ ಲೈಫ್' ಎಂಬ ಆಪ್ ಮೂಲಕ ಪಡೆದ ಮಾಹಿತಿಯನ್ನು ಕೇಂಬ್ರಿಡ್ಜ್ ಅನಲಿಟಿಕಾ ದುರ್ಬಳಕೆ ಮಾಡಿಕೊಂಡಿದ್ದು ಜಗತ್ತಿನಾದ್ಯಂತ ಸುದ್ದಿ ಮಾಡಿತ್ತು. ಕೇಂಬ್ರಿಡ್ಜ್ ಅನಲಿಟಿಕಾ ಹಲವು ದೇಶಗಳ ಚುನಾವಣೆಗಳ ಮೇಲೆ ಪ್ರಭಾವ ಬೀರಿದ ಆರೋಪವಿತ್ತು. ಸಾಮಾಜಿಕ ಜಾಲತಾಣಗಳ ಬಳಕೆಗೆ ಆಗುವ ವೆಚ್ಚ ಹಾಗೂ ಅದರಿಂದ ಜನರ ಮೇಲೆ ಆಗುವ ಪರಿಣಾಮಗಳನ್ನು ಇನ್ನುಷ್ಟು ಗಂಭೀರವಾಗಿ ಪರಿಗಣಿಸಿ ನಿಗಾ ವಹಿಸುವ ಅಗತ್ಯವಿದೆ ಎಂಬುದನ್ನು ಕೇಂಬ್ರಿಡ್ಜ್ ಅನಲಿಟಿಕಾ ಪ್ರಕರಣ ತೋರಿಸುತ್ತದೆ. ಆದರೆ, ಅಂತಹ ನಿಗಾ ವ್ಯವಸ್ಥೆ ಸದ್ಯಕ್ಕಂತೂ ಕಂಡು ಬರುತ್ತಿಲ್ಲ.**


ದ್ವಿತೀಯ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಲೀಲಾದೇವಿ
ನಿಧನ : 05.04.2021
ನೀವು ನಮ್ಮನ್ನಗಲಿ
ಎರಡು ವರ್ಷಗಳಾದವು...
ನಿಮ್ಮ ನೆನಪುಗಳು,
ನಿಮ್ಮ ಅನುಪಸ್ಥಿತಿ ಕಾಡುತ್ತಿದೆ
ನಮಗಿನ್ನು...
ಪ್ರಾರ್ಥಿಸುವೆವು ಅನುದಿನ
ದೇವರು ದಯಪಾಲಿಸಲಿ
ನಿಮಗೆ ಚಿರಶಾಂತಿಯನ್ನು...

ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಶ್ರೀ ತುಳಸಿರಾಮ್ ಮತ್ತು ಮಕ್ಕಳು,
ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಹಾಗೂ ಕುಟುಂಬ ವರ್ಗದವರು
ಶ್ರೀ ಅರವಿಂದ್ ಮೆಟಲ್ಸ್
ಶ್ರೀ ಆಭೂಷಣ್ ಜ್ಯೂಯಲರ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.

# ನ್ಯಾಯದ ವಿಷಯದಲ್ಲಿ ಕರ್ನಾಟಕ ಮೊದಲು

**(1ನೇ ಪುಟದಿಂದ)** ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ತಮಿಳುನಾಡು, ತೆಲಂಗಾಣ, ಗುಜರಾತ್ ಹಾಗೂ ಆಂಧ್ರ ಪ್ರದೇಶಗಳಿವೆ.

ಜನಸಂಖ್ಯೆ ಕೋಟಿಗೂ ಕಡಿಮೆ ಇರುವ ರಾಜ್ಯಗಳಲ್ಲಿ ಸಿಕ್ಕಿಂ ಮೊದಲ ಸ್ಥಾನದಲ್ಲಿದೆ. ಅರುಣಾಚಲ ಪ್ರದೇಶ ಹಾಗೂ ತ್ರಿಪುರ ನಂತರದ ಸ್ಥಾನಗಳಲ್ಲಿವೆ.

ಕರ್ನಾಟಕ ರಾಜ್ಯ ಮಾತ್ರ ನಿರಂತರವಾಗಿ ಪೊಲೀಸ್ ಅಧಿಕಾರಿಗಳ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಅಗತ್ಯ ಕೋಟಾ ಸ್ಥಾನಗಳನ್ನು ನೀಡಿದೆ ಎಂದೂ ವರದಿ ತಿಳಿಸಿದೆ. ಆದರೆ, ನ್ಯಾಯಾಂಗದ ಕೆಳ ಹಂತದಲ್ಲಿ ಯಾವುದೇ ರಾಜ್ಯ ಪರಿಶಿಷ್ಟರು ಹಾಗೂ ಇತರೆ ಹಿಂದುಳಿದ ವರ್ಗಗಳ ಕೋಟಾಗಳನ್ನು ಸಂಪೂರ್ಣವಾಗಿ ಪೂರೈಸಲು ಸಾಧ್ಯವಾಗಿಲ್ಲ.

ಬಜೆಟ್ ಅನುದಾನ ಕಡಿಮೆ ಇರುವ ಕಾರಣದಿಂದ ಇಡೀ ನ್ಯಾಯಿಕ ವ್ಯವಸ್ಥೆ ಮೇಲೆ ಪರಿಣಾಮವಾಗುತ್ತಿದೆ. ದೆಹಲಿ ಹಾಗೂ ಚಂಡೀಘಡ ಕೇಂದ್ರಾಡಳಿತ ಪ್ರದೇಶಗಳನ್ನು ಹೊರತು ಪಡಿಸಿದರೆ ಬೇರೆ ಯಾವುದೇ ರಾಜ್ಯ ತನ್ನ ವಾರ್ಷಿಕ ವೆಚ್ಚದ ಶೇ.1ಕ್ಕಿಂತ ಹೆಚ್ಚಿನ ಮೊತ್ತವನ್ನು ನ್ಯಾಯಾಂಗಕ್ಕೆ ನೀಡಿಲ್ಲ.

ಪೊಲೀಸ್, ಬಂಧೀಖಾನೆ, ಕಾನೂನು ನೆರವು ಹಾಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ಖಾಲಿ ಹುದ್ದೆಗಳ ಸಮಸ್ಯೆ ಇದೆ. 140 ಕೋಟಿ ಜನಸಂಖ್ಯೆಯ ದೇಶದಲ್ಲಿ 20,076 ನ್ಯಾಯಮೂರ್ತಿಗಳಿದ್ದಾರೆ. ನ್ಯಾಯಮೂರ್ತಿಗಳ ಶೇ.22ರಷ್ಟು ಹುದ್ದೆಗಳು ಖಾಲಿ ಇವೆ. ಹೈಕೋರ್ಟ್ ನ್ಯಾಯಮೂರ್ತಿಗಳ ಶೇ.30ರಷ್ಟು ಹುದ್ದೆಗಳು ಖಾಲಿ ಇವೆ. ಪೊಲೀಸರಲ್ಲಿ ಶೇ.11.75ರಷ್ಟು ಮಾತ್ರ ಮಹಿಳೆಯರಿದ್ದಾರೆ. ಶೇ.29ರಷ್ಟು ಪೊಲೀಸ್ ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಪ್ರತಿ ಲಕ್ಷ ಜನಸಂಖ್ಯೆಗೆ 152.8 ಪೊಲೀಸರು ಮಾತ್ರ ಇದ್ದಾರೆ. ಅಂತರರಾಷ್ಟ್ರೀಯ ಮಾನದಂಡ 222 ಆಗಿದೆ ಎಂದು ವರದಿ ಹೇಳಿದೆ.

ಬಂಧೀಖಾನೆಗಳು ಸಾಮರ್ಥ್ಯದ ಶೇ.130ರಷ್ಟು ತುಂಬಿವೆ. ಬಂಧಿತರಲ್ಲಿ ಶೇ.77.1ರಷ್ಟು ಜನರು ವಿಚಾರಣೆ ಪೂರ್ಣಗೊಳ್ಳುವುದನ್ನು ಕಾಯುತ್ತಿದ್ದಾರೆ.

ಕೇಂದ್ರ ಸರ್ಕಾರ ನೀಡುವ ಅನುದಾನವನ್ನು ಬಹುತೇಕ ರಾಜ್ಯಗಳು ಸಂಪೂರ್ಣ ಬಳಸುತ್ತಿಲ್ಲ. ಪೊಲೀಸ್, ಬಂಧೀಖಾನೆ ಹಾಗೂ ನ್ಯಾಯಾಂಗದ ಅಗತ್ಯಗಳ ಬಗ್ಗೆ ರಾಜ್ಯಗಳ ವೆಚ್ಚ ಹೆಚ್ಚಳ ಸಹ ಒಟ್ಟಾರೆ ವೆಚ್ಚಕ್ಕೆ ಅನುಗುಣವಾಗಿ ಏರಿಕೆಯಾಗುತ್ತಿಲ್ಲ.

ಐ.ಜೆ.ಆರ್.ನ ಮೊದಲ ಎರಡು ವರದಿಗಳಿಗೆ ಹೋಲಿಸಿದರೆ ಮೂರನೇ ವರದಿಯಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದಿದೆ. ಆದರೂ, ಇನ್ನೂ ಸಾಕಷ್ಟು ಸುಧಾರಣೆಯ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮದನ್ ಬಿ. ಲೋಕುರ್ ಹೇಳಿದ್ದಾರೆ.

ಪೊಲೀಸ್ ಸಿಬ್ಬಂದಿಯಲ್ಲಿ ಮಹಿಳಾ ಅಧಿಕಾರಿಗಳ ಕೊರತೆ ಇಲ್ಲ. ಕಾನೂನು ನೆರವು ವಿಭಾಗ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದರೂ, ಸಾಕಷ್ಟು ಜನರಿಗೆ ಗುಣಮಟ್ಟದ ಉಚಿತ ಕಾನೂನು ನೆರವಿನ ಅಗತ್ಯವಿದೆ. ನಮ್ಮ ಸೇವೆಗಳ ಬಗ್ಗೆ ಜನರಲ್ಲಿ ಹೆಚ್ಚು ವಿಶ್ವಾಸ ಮೂಡಿಸಬೇಕಿದೆ ಎಂದು ಲೋಕುರ್ ತಿಳಿಸಿದ್ದಾರೆ.

2030ರ ವೇಳೆಗೆ ಎಲ್ಲರಿಗೂ ನ್ಯಾಯ ಪ್ರಕ್ರಿಯೆ ಲಭ್ಯವಾಗಲಿದೆ ಎಂದು ಭಾರತ ಭರವಸೆ ನೀಡಿದೆ. ಇದಕ್ಕಾಗಿ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಬೇಕಿದೆ ಎಂದು ಐ.ಜೆ.ಆರ್. ವರದಿಯ ಪ್ರಧಾನ ಸಂಪಾದಕರಾದ ಮಾಜಾ ದಾರುವಾಲ ಹೇಳಿದ್ದಾರೆ.

# ಸಂಬಂಧ ಬೆಳೆಸಿ, ಮದುವೆಯಾಗದಿದ್ದರೆ ಅತ್ಯಾಚಾರ ಎನ್ನಲಾಗದು : ಹೈಕೋರ್ಟ್

ಮುಂಬೈ, ಏ. 4 – ಇಬ್ಬರು ವಯಸ್ಕರು ಪರಸ್ಪರ ಸಮ್ಮತಿಯಿಂದ ಬೆಳೆಸಿದ ಸಂಬಂಧ ಹಳಿಸಿದರೆ ಇಲ್ಲವೇ ಮದುವೆಯಾಗಿ ಪರಿವರ್ತನೆಯಾಗದಿದ್ದರೆ ಅತ್ಯಾಚಾರದ ಆರೋಪ ಮಾಡಲಾಗದು ಎಂದು ಬಾಂಬೆ ಹೈಕೋರ್ಟ್ ತಿಳಿಸಿದೆ.

2016ರಲ್ಲಿ ವರ್ಸೋವ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣದಿಂದವ್ಯಕ್ತಿಯೊಬ್ಬರನ್ನುಖುಲಾಸೆಗೊಳಿಸುವಾಗ ನ್ಯಾಯಮೂರ್ತಿ ಭಾರತಿ ಡಾಂಗ್ರೆ ಅವರು ಈ ನಿಲುವು ತಳೆದಿದ್ದಾರೆ.

ಇಬ್ಬರು ವಯಸ್ಕರು ಜೊತೆಯಾಗಿ ಸಂಬಂಧ ಬೆಳೆಸಿರುತ್ತಾರೆ. ನಂತರ ಒಂದು ಹಂತದಲ್ಲಿ ಸಂಬಂಧ ಹಳಸಿದಾಗ ಹಾಗೂ ಯಾವುದೋ ಕಾರಣಕ್ಕೆ ಮದುವೆಯಾಗಲು ಸಾಧ್ಯವಾಗದೇ ಹೋದಾಗ ಅತ್ಯಾಚಾರದ ಆರೋಪ ಮಾಡಲಾಗದು ಎಂದು ನ್ಯಾಯಾಲಯ ತಿಳಿಸಿದೆ.

ಸಾಮಾಜಿಕ ಜಾಲತಾಣದ ಮೂಲಕ ವ್ಯಕ್ತಿಯ ಪರಿಚಯವಾಗಿತ್ತು. ಮದುವೆ ಮಾಡಿಕೊಳ್ಳುವುದಾಗಿ ಹೇಳಿ ದೈಹಿಕ ಸಂಬಂಧ ಬೆಳೆಸಲಾಗಿತ್ತು ಎಂದು 26 ವರ್ಷದ ಮಹಿಳೆಯೊಬ್ಬರು ದೂರು ನೀಡಿದ್ದರು.

ನಂತರ ನ್ಯಾಯಾಲಯದ ಮೊರೆ ಹೋಗಿದ್ದ ವ್ಯಕ್ತಿ, ಪ್ರಕರಣದಿಂದ ಖುಲಾಸೆ ಮಾಡಲು ಕೋರಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯ, ಎಂಟು ವರ್ಷಗಳಿಂದ ಉಭಯರು ಸಂಬಂಧದಲ್ಲಿದ್ದಾರೆ. ಸಂಬಂಧ ಬೆಳೆಸಿದ ಸಂದರ್ಭದಲ್ಲಿ ಮಹಿಳೆ ವಯಸ್ಕರಾಗಿದ್ದರು. ಈ ಸಂಬಂಧದ ಪರಿಣಾಮ ಅರ್ಥ ಮಾಡಿಕೊಳ್ಳುವಷ್ಟು ಪ್ರಬುದ್ಧತೆ ಅವರಲ್ಲಿತ್ತು ಎಂದು ತಿಳಿಸಿದೆ.

ಈ ಸಂಬಂಧ ಸುದೀರ್ಘ ಕಾಲದ್ದಾಗಿತ್ತು. ಕೇವಲ ಮದುವೆಯಷ್ಟೇ ಅಲ್ಲದೇ, ಪ್ರೀತಿಯ ಕಾರಣದಿಂದಲೂ ಜೊತೆಗಿದ್ದುದಾಗಿ ಮಹಿಳೆಯೇ ಹೇಳಿದ್ದಾರೆ ಎಂದು ನ್ಯಾಯಾಲಯ ಉಲ್ಲೇಖಿಸಿದೆ.

# ಕೊಕ್ಕನೂರಿನಲ್ಲಿ ಸಂಭ್ರಮದ ಗ್ರಾಮದೇವತೆ ಹಬ್ಬ



ಮಲೇಬೆನ್ನೂರು, ಏ.4- ಕೊಕ್ಕನೂರು ಗ್ರಾಮದಲ್ಲಿ 9 ವರ್ಷಗಳ ನಂತರ ಹಮ್ಮಿಕೊಂಡಿರುವ ಗ್ರಾಮದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವವು ಮಂಗಳವಾರ ಸಂಭ್ರಮದಿಂದ ಆರಂಭಗೊಂಡಿತು.

ಮಂಗಳವಾರ ಬೆಳಿಗ್ಗೆಯಿಂದಲೂ ಗ್ರಾಮದ ಎಲ್ಲಾ ಮಹಿಳೆಯರು ಸರದಿ ಸಾಲಿನಲ್ಲಿ ನಿಂತು ಶ್ರೀ ದುರ್ಗಾಂಬಿಕಾ ದೇವಿಗೆ ಉಡಿ ತುಂಬಿ ಭಕ್ತಿ ಸಮರ್ಪಿಸಿದರು.

ಗ್ರಾಮದೇವತೆ ಹಬ್ಬಕ್ಕಾಗಿ ಗ್ರಾಮ ನವ ವಧುವಿನಂತೆ ಸಿಂಗಾರಗೊಂಡಿದ್ದು, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿದೆ.

ಮಂಗಳವಾರ ತಡರಾತ್ರಿ ಆರಂಭಗೊಂಡ ಶ್ರೀ ದುರ್ಗಾಂಬಿಕಾ ದೇವಿಯ ಮೆರವಣಿಗೆಯು ಬುಧವಾರ ಬೆಳಗಿನ ಜಾವದವರೆಗೂ ನಡೆದು, ನಂತರ ದೇವಸ್ಥಾನ ಆವರಣದಲ್ಲಿ ಹಿಟ್ಟಿನ ಕೋಣನ ಬಲಿ ನೀಡಿ, ಚರಗ ಹಾಕಲಾಗುವುದು.

ಬುಧವಾರ ಬೆಳಿಗ್ಗೆಯಿಂದ ಸಂಜೆವರೆಗೂ ಭಕ್ತಾದಿಗಳಿಂದ ಬೇವಿನ ಉಡುಗೆ, ದಿಂಡು ಉರುಳು ಸೇವೆ ನಡೆಯಲಿವೆ. ಬುಧವಾರ ಮತ್ತು ಗುರುವಾರ ಸಂಜೆ ಹಾಸ್ಯಗಾ ರರಿಂದ ಮನೋರಂಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶುಕ್ರವಾರ ಬೆಳಿಗ್ಗೆ ಮಂಗಳವಾದ್ಯಗಳೊಂದಿಗೆ ಅಮ್ಮನ ಹಬ್ಬಕ್ಕೆ ತೆರೆ ಬೀಳಲಿದೆ.

**ಮನೆಗಳು ಭರ್ತಿ :** ಅಮ್ಮನ ಹಬ್ಬಕ್ಕಾಗಿ ಗ್ರಾಮದ ಎಲ್ಲಾ ಮನೆಗಳಿಗೆ ಮನೆಯ ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಬಂಧು-ಮಿತ್ರರು ಆಗಮಿಸಿರುವುದರಿಂದ ಮನೆಗಳು ಜನರಿಂದ ಭರ್ತಿಯಾಗಿ ಮನೆಗಳಲ್ಲಿ ಸಂಭ್ರಮ ನೆಲೆಸಿದೆ.

ಬುಧವಾರ ಸಂಜೆಯಿಂದ ಬಾಡೂಟ ಆರಂಭವಾಗಲಿದ್ದು, ಗುರುವಾರ ರಾತ್ರಿವರೆಗೂ ನಡೆಯಲಿದೆ. ಅದಕ್ಕಾಗಿ ಮಾಂಸಹಾರಿಗಳ ಮನೆಗಳಲ್ಲಿ 1-4 ಕುರಿಗಳನ್ನು ಕಟ್ಟಿದ್ದಾರೆ. ಬುಧವಾರ ಸಂಜೆಯಿಂದ ಗುರುವಾರ ರಾತ್ರಿವರೆಗೂ ಕೊಕ್ಕನೂರು ಗ್ರಾಮದಲ್ಲಿ ಜನ ಜಾತ್ರೆ ನಡೆಯಲಿದೆ.

# ಜಾಲತಾಣಗಳ ವೆಚ್ಚಕ್ಕೆ ಬೀಳುವುದೇ ಕಡಿವಾಣ?

**(1ನೇ ಪುಟದಿಂದ)** ಬಗ್ಗೆ ಸಾಮಾಜಿಕ ಜಾಲತಾಣಗಳ ಅಡ್ಮಿನ್‌ಗಳ ಮೇಲಂತೂ ತೂಗುಕತ್ತಿ ಇದ್ದೇ ಇದೆ. ಚುನಾವಣೆ ವೇಳೆ ಪ್ರಚೋದನಕಾರಿ ವಿಡಿಯೋ ಇಲ್ಲವೇ ಮಾಹಿತಿಯನ್ನು ಯಾರೋ ಕಳಿಸಿದರು ಎಂದು ಕಣ್ಣು ಮುಚ್ಚಿ ಫಾರ್ವರ್ಡ್ ಮಾಡಿದರೆ ಸಮಸ್ಯೆ ಎದುರಾಗಬಹುದು.

ಚುನಾವಣೆ ಮೇಲೆ ಪ್ರಭಾವ ಬೀರುವ ಮಾಹಿತಿಯನ್ನು ಬೇಜವಾಬ್ದಾರಿಯಿಂದ ಫಾರ್ವರ್ಡ್ ಮಾಡುವುದು ಕಾನೂನು ಅಷ್ಟೇ ಅಲ್ಲದೇ ಸಾಮಾಜಿಕ ಹೊಣೆಗಾರಿಕೆ ದೃಷ್ಟಿಯಿಂದಲೂ ಸೂಕ್ತವಲ್ಲ.

ಈ ವಿಷಯದಲ್ಲಿ ಕೇವಲ ಚುನಾವಣಾ ನೀತಿ ಸಂಹಿತೆ ಅಷ್ಟೇ ಅಲ್ಲದೇ, ಮಾಹಿತಿ ತಂತ್ರಜ್ಞಾನ ಕಾಯ್ದೆಯೂ ಅನ್ವಯವಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ. ಹೀಗಾಗಿ ಚುನಾವಣಾ ಸಮಯದಲ್ಲಿ ಅಭ್ಯರ್ಥಿಗಳು ಹಾಗೂ ಪಕ್ಷಗಳ ಮಾಹಿತಿಯನ್ನು ಹಂಚಿಕೊಳ್ಳುವಾಗ ಜನಸಾಮಾನ್ಯರು ಇನ್ನಷ್ಟು ಎಚ್ಚರಿಕೆ ವಹಿಸಬೇಕಿದೆ.

# ಮೋದಿ ಸರ್ಕಾರಕ್ಕೆ ಒಂಭತ್ತು ವರ್ಷ

**(1ನೇ ಪುಟದಿಂದ)** ಮಹಿಳೆಯರು ಕಟ್ಟಿಗೆಗಾಗಿ ಅಲೆಯಬೇಕಿಲ್ಲ. ಇದರಿಂದ ಸಾಕಷ್ಟು ಸಮಯ ಉಳಿತಾಯವಾಗಿದ್ದು, ದುಡಿಮೆಗೆ ಹೆಚ್ಚಿನ ಅವಕಾಶ ದೊರೆತಿದೆ ಎಂದು ಮೂಲಗಳು ತಿಳಿಸಿವೆ.

ಇದೇ ರೀತಿ ದೇಶಾದ್ಯಂತ ಕೋಟ್ಯಂತರ ಶೌಚಾಲಯಗಳನ್ನು ನಿರ್ಮಿಸಿದ್ದರಿಂದ ನೈರ್ಮಲ್ಯಕ್ಕೆ ಉತ್ತೇಜನ ಸಿಗುವ ಜೊತೆಗೆ ಹಲವಾರು ರೋಗಗಳನ್ನು ನಿವಾರಣೆ ಮಾಡಲು ಸಾಧ್ಯವಾಗಿದೆ. ಶೌಚಾಲಯ ನಿರ್ಮಾಣದಿಂದ ಶಾಲೆಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಬಡವರು ಘನತೆಯ ಜೀವನ ನಡೆಸಲು ನೆರವಾಗಿದೆ.

ಮನೆಗಳಿಗೆ ನಲ್ಲಿ ನೀರಿನ ಸೌಲಭ್ಯ ಕಲ್ಪಿಸುವ ಯೋಜನೆಯನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ. ಇದರಿಂದ ಶುದ್ಧ ಕುಡಿಯುವ ನೀರು ಕೋಟ್ಯಂತರ ಜನರಿಗೆ ಸಿಗುವಂತಾಗಿದೆ. ಪ್ರಮುಖವಾಗಿ ಮಹಿಳೆಯರು ಪ್ರತಿನಿತ್ಯ ನೀರಿಗಾಗಿ ಅಲೆಯುವುದು ಶಾಶ್ವತವಾಗಿ ತಪ್ಪಿದೆ ಎಂದು ಮೂಲಗಳು ಹೇಳಿವೆ.

ಇದರಿಂದಾಗಿ ಮಹಿಳೆಯರಿಗೆ ಸಾಕಷ್ಟು ಸಮಯ ಉಳಿತಾಯವಾಗಿದೆ. ರೋಗಗಳಿಗೆ ಸಿಲುಕುವುದು ತಪ್ಪಿದೆ. ಈ ಕ್ರಮಗಳಿಂದ ಪ್ರತಿ ವರ್ಷ ಲಕ್ಷಾಂತರ ಮಕ್ಕಳ ಜೀವ ಉಳಿದಿದೆ. ಈ ಎಲ್ಲ ಪರೋಕ್ಷ ಪರಿಣಾಮಗಳ ಬಗ್ಗೆ ಪರಿಣಾಮಕಾರಿಯಾಗಿ ಪ್ರಚಾರ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಎರಡನೇ ಹಂತದ ಪರಿಣಾಮದ ಪ್ರಚಾರ ಹೊಸ ಹಾಗೂ ಆವಿಷ್ಕಾರಿ ವಿಧಾನವಾಗಿದೆ. ಮೋದಿ ಸರ್ಕಾರದ ನೀತಿಗಳು ಹಾಗೂ ಯೋಜನೆಗಳಿಂದ ಆಗಿರುವ ದೂರಗಾಮಿ ಪರಿಣಾಮಗಳ ಬಗ್ಗೆ ಜನರಿಗೆ ತಿಳಿಸಲಾಗುವುದು ಎಂದು ಮೂಲಗಳು ಹೇಳಿವೆ.

ಈ ಯೋಜನೆಗಳ ನೇರ ಪರಿಣಾಮಗಳ ಬಗ್ಗೆ ಚರ್ಚೆಗಳಾಗುತ್ತಿವೆ. ಆದರೆ, ಪರೋಕ್ಷವಾಗಿಯೂ ಸಾಕಷ್ಟು ಲಾಭಗಳಾಗಿವೆ ಹಾಗೂ ಈ ಲಾಭಗಳು ಶಾಶ್ವತ ಸ್ವರೂಪದವು ಎಂದೂ ಮೂಲಗಳು ವಿವರಿಸಿವೆ.

# ಬಂಜಾರ ಸ್ವಾಮೀಜಿ ಆತ್ಮಹತ್ಯೆಗೆ ಯತ್ನ

**(1ನೇ ಪುಟದಿಂದ)** ದೊರೆಯುತ್ತಿತ್ತು ಎಂದು ಹೇಳಿದರು.

ನಂತರ ಅಂಬೇಡ್ಕರ್ ಪ್ರತಿಮೆ ಪಕ್ಕದ ಮೆಟ್ಟಿಲು ಏರಿ, ಮೆಟ್ಟಿಲ ಸರಳಿಗೆ ಕುಣಿಕೆ ಹಾಕಿ ಆತ್ಮಹತ್ಯೆ ಯತ್ನ ನಡೆಸಿದರು. ತಕ್ಷಣವೇ ಪೊಲೀಸರು ಹಾಗೂ ನೆರೆದಿದ್ದವರು ಅವರನ್ನು ರಕ್ಷಿಸಿದರು. ನಂತರ ಅವರನ್ನು ಶಿಗ್ಗಾಂವ್ ಆಸ್ಪತ್ರೆಗೆ ರವಾನಿಸಲಾಯಿತು. ಅವರ ಪರಿಸ್ಥಿತಿ ಗಂಭೀರವಾಗಿದೆ ಎಂದು ಹೇಳಲಾಗಿದೆ.

# ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಮಹಿಳಾ ಘಟಕದಿಂದ ಮಹಿಳಾ ದಿನಾಚರಣೆ



ಹರಿಹರ, ಏ, 4- ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಮಹಿಳಾ ಘಟಕದ ವತಿಯಿಂದ ಪಂಚಮಸಾಲಿ ಗುರು ಪೀಠದ ಆವರಣದಲ್ಲಿ, ರಾಜ್ಯದ ವಿವಿಧ ಘಟಕಗಳ ಸಹಯೋಗದೊಂದಿಗೆ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮಿಗಳ ಸಾನ್ನಿಧ್ಯದಲ್ಲಿ ಮಹಿಳಾ ದಿನಾಚರಣೆ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಅದ್ಭುತ ಭಾಷಣಗಾರ್ತಿ, ಕು. ಹಾರಿಕ ಮಂಜುನಾಥ್ ಮತ್ತು ಕು. ಚೈತ್ರ ಅತಿಥಿಗಳಾಗಿ ಭಾಷಣ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಮಹಿಳಾ ಘಟಕದ ಕಾರ್ಯಾಧ್ಯಕ್ಷರಾದ ಶ್ರೀಮತಿ ರಶ್ಮಿನಾಗರಾಜ್ ಕುಂಕೋದ್ ಅವರು ವಹಿಸಿದ್ದರು.

ಈ ಸಂದರ್ಭದಲ್ಲಿ ರಾಜ್ಯ ಮಹಿಳಾ ಘಟಕ ಉಪಾಧ್ಯಕ್ಷೆ ಶ್ರೀಮತಿ ವಸಂತ ಹುಲ್ಲತ್ತಿ, ಶ್ರೀಮತಿ ರಾಜೇಶ್ವರಿ ಬಳ್ಳಾರಿ, ಮೇಘ ಪಾಟೀಲ್, ಶ್ರೀಮತಿ ಕೊಟ್ರೇಶ್ ನಡೆಸಿ ಕೊಟ್ಟರು ಧರ್ಮದರ್ಶಿಗಳಾದ ಚಂದ್ರಶೇಖರ್ ಪೂಜಾರ್,. ಆರುಂಡಿ ಸುವರ್ಣಮ್ಮ, ದಾವಣಗೆರೆ ಜಿಲ್ಲಾಧ್ಯಕ್ಷೆ ಶ್ರೀಮತಿ ಸುಷ್ಮಾಪಾಟೀಲ್, ಸೃಷ್ಟಿ, ಶ್ರೀಮತಿ ವಾಣಿ ಅಜಯ್, ಜಿಲ್ಲಾ ಘಟಕದ ಅಧ್ಯಕ್ಷ ಬಿ.ಸಿ. ಉಮಾಪತಿ ಮತ್ತು ಇತರರು ಹಾಜರಿದ್ದರು.

# ಕೀರ್ತಿಶೇಷ ಪಿ.ಆರ್. ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವದ ಸಿದ್ಧತಾ ಸಭೆ



ದಾವಣಗೆರೆ, ಏ. 4 - ಕೀರ್ತಿಶೇಷ ಪಿ.ಆರ್. ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವ ವನ್ನು ದಾವಣಗೆರೆಯಲ್ಲಿ ಶೀಘ್ರದಲ್ಲೇ ವಿಜೃಂಭಣೆಯಿಂದ ಆಚರಿಸಲು ಮೈಸೂರಿನ ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನದಿಂದ ವಿಶ್ವವಿದ್ಯಾನಿಲಯದ ದೃಶ್ಯ ಕಲಾ ಕಾಲೇಜಿನ ಸಭಾಂಗಣದಲ್ಲಿ ಸಮಾರಂಭದ ಪೂರ್ವಭಾವಿ ಸಿದ್ಧತೆಗೆ ಸಭೆ ನಡೆಸಲಾಯಿತು.

ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬರವರ ಅಧ್ಯಕ್ಷತೆಯಲ್ಲಿ ನಡೆದ ಈ ಮಹತ್ವದ ಸಭೆಯಲ್ಲಿ ಕಾರ್ಯದರ್ಶಿ ಕೆ.ಸಿ. ಮಹದೇವಶೆಟ್ಟಿ, ಸಮಿತಿ ಸದಸ್ಯರಾದ ಚಿಕ್ಕಣ್ಣ ಸಿ. ಮಾನಸ, ಚಂದ್ರಶೇಖರಯ್ಯ, ಜನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ, ವಿಶ್ವವಿದ್ಯಾನಿಲಯದ ದೃಶ್ಯ ಕಲಾ ಮಹಾವಿದ್ಯಾಲಯದ ಮಾರ್ಗದರ್ಶಕರಾದ ಡಾ. ಸತೀಶ್‌ಕುಮಾರ್ ಪಂಚಪ್ಪ, ಹಿರಿಯ ಕಲಾವಿದ ನಾ. ರೇವನ್, ಎ. ಮಹಾಲಿಂಗಪ್ಪ ಮತ್ತು ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಮಲ್ಲಿಕಾರ್ಜುನ ಕಲಮರಹಳ್ಳಿ, ಸದಾನಂದ ಹೆಗಡೆ, ದತ್ತಾತ್ರೇಯ ಎನ್. ಭಟ್, ಡಾ. ರವೀಂದ್ರ ಎಸ್. ಕಮ್ಮಾರ, ಸಾಲಿಗ್ರಾಮ ಗಣೇಶ್ ಶೆಣೈ, ಚಂದ್ರಶೇಖರ್ ಎಸ್. ಸಂಗಾ, ರವೀಂದ್ರ ಎಚ್. ಅರಳಗುಪ್ಪಿ, ಚಂದ್ರಶೇಖರ ತೆಗ್ಗಿನಮಠ, ಸುರೇಶ್ ಡಿ. ಹೆಚ್., ಹರೀಶ್ ಹೆಚ್.ಎಸ್., ಪ್ರಮೋದ್ ಕೆ.ವಿ. ಸುಭಾಷ್ ಬಿ. ಕುಂಬಾರ ಮುಂತಾದವರು ಉಪಸ್ಥಿತರಿದ್ದರು.

ಪ್ರತಿಷ್ಠಾನದ ಕಾರ್ಯದರ್ಶಿ ಕೆ.ಸಿ. ಮಹದೇವಶೆಟ್ಟಿ ಸ್ವಾಗತಿಸಿದರು. ದೃಶ್ಯ ಕಲಾ ಮಹಾವಿದ್ಯಾಲಯದ ಮಾರ್ಗದರ್ಶಕರಾದ ಡಾ. ಸತೀಶ್‌ಕುಮಾರ್ ಪಂಚಪ್ಪ ವಂದಿಸಿದರು.

# ಪ್ರಶ್ನಿಸಿದ್ದಕ್ಕೆ ರಾಹುಲ್ ಗಾಂಧಿ ಕಿಡಿ

**(1ನೇ ಪುಟದಿಂದ)** ಎಂದು ರಾಹುಲ್ ಗಾಂಧಿ ತಮ್ಮ ಆರೋಪಗಳನ್ನು ಪುನರುಚ್ಚರಿಸಿದರು. ನಂತರ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿದ ರಾಹುಲ್ ಗಾಂಧಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೌನವಾಗಿದ್ದಾರೆ. ಅವರೇಕೆ ಹೆದರಿದ್ದಾರೆ? ಎಂದು ಪ್ರಶ್ನಿಸಿದ್ದಾರೆ.

# ಶಿವನಪಾದದಲ್ಲಿ ಇಂದು - ನಾಳೆ ಜಾತ್ರಾ ಮಹೋತ್ಸವ

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಶ್ರೀ ಶಿವನಪಾದ ಕ್ಷೇತ್ರದಲ್ಲಿ ಇಂದು ಮತ್ತು ನಾಳೆ ಜಾತ್ರಾ ಮಹೋತ್ಸವ ಜರುಗಲಿದೆ. ಇಂದು ಬೆಳಿಗ್ಗೆ 8 ಕ್ಕೆ ಗಂಟೆಗೆ ಶಿವ ಧ್ವಜಾರೋಹಣ ನಿಜಲಿಂಗಪ್ಪ ಮಾರಯ್ಯ ಅವರಿಂದ ನೆರವೇರಲಿದೆ. ನಾಳೆ ಗುರುವಾರ ಬೆಳಿಗ್ಗೆ 8 ಸದಾಶಿವಪ್ಪ ಬಣಕಾರ್ ಅವರಿಂದ ಶಿವ ಧ್ವಜಾರೋಹಣ ನಡೆಯಲಿದೆ. ಬೆಳಿಗ್ಗೆ 9 ಗಂಟೆಗೆ ಮಾಯತಮ್ಮನಮುಚಡಿ ಗ್ರಾಮದ ಭಕ್ತರಿಂದ ಸಕಲ ವಾದ್ಯಗಳೊಂದಿಗೆ ರಥಸೇವೆ ಹಾಗೂ ಕೊರಟಿಕೆರೆ ಗ್ರಾಮದ ಭಕ್ತಾದಿಗಳಿಂದ ಜರುಗಲಿದೆ.

# ಹರಿಹರದಲ್ಲಿ ಮಹಾವೀರ ಜಯಂತಿ

ಹರಿಹರ,ಏ.4- ಭಗವಾನ್ ಶ್ರೀ ಮಹಾವೀರ ಜನ್ಮ ಕಲ್ಯಾಣ ಮಹಾ ಮಹೋತ್ಸವದ ನಿಮಿತ್ತವಾಗಿ ನಗರದ ಶ್ರೀ ದಿಗಂಬರ ಜೈನ ಮಂದಿರದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ದೇವಸ್ಥಾನ ರಸ್ತೆಯಲ್ಲಿರುವ ತ್ರಿಕೂಟ ದಿಗಂಬರ ಜೈನ ಮಂದಿರದಲ್ಲಿ ಬೆಳಿಗ್ಗೆ ಶ್ರೀ ಪಾರ್ಶ್ವನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ ಮಾಡಲಾಯಿತು.

ನಂತರ ಗತಿಸಿಹೋದ ಶ್ರವಣಬೆಳಗೊಳದ ಸ್ವಾಮೀಜಿ ಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳ ವಿನಯಾಂಜಲಿ ಸಲ್ಲಿಸಲಾಯಿತು. ನಂತರ ವಿಶೇಷ ಅಭಿಷೇಕ, ಶ್ರೀ ಮಹಾವೀರರ ಬಾಲ ಲೀಲೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸಮಾಜ ಸಂಘದ ಅಧ್ಯಕ್ಷ ಜಿನಚಂದ್ರ, ಕೆ.ಪಿ ಗುಣಪಾಲ್, ಅಶೋಕ ಹರ್ದಿ, ತೀರ್ಥಪ್ಪ ಹದಳಗಿ ಹಾಗೂ ಇತರರು ಭಾಗವಹಿಸಿದ್ದರು.



# ಹರಪನಹಳ್ಳಿಯಲ್ಲಿ ಮಹಾವೀರ ಜಯಂತಿ



ಹರಪನಹಳ್ಳಿ, ಏ. 4- ಸರ್ವ ಸಂಗ ಪರಿತ್ಯಾಗಿ ಭಗವಾನ್ ಶ್ರೀ ಮಹಾವೀರ ಅವರ ಜಯಂತಿಯನ್ನು ಪಟ್ಟಣದ ತಾಲ್ಲೂಕು ಆಡಳಿತ ಹಾಗೂ ಜೈನ್ ಸಮುದಾಯದ ವತಿಯಿಂದ ಸರಳವಾಗಿ ಆಚರಿಸಲಾಯಿತು.

ಪಟ್ಟಣದ ಜೈನ ಬಸದಿಯಲ್ಲಿ ದಿಗಂಬರ ಜೈನರು ವಿಶೇಷ ಅನಂತ ಪೂಜೆ ಸಲ್ಲಿಸಿದರು. ಬೈಕ್ ರ‍್ಯಾಲಿ ಮೂಲಕ ತಾಲ್ಲೂಕು ಆಡಳಿತದ ಕಚೇರಿವರೆಗೂ ತೆರಳಿ ಶ್ರೀ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಟಿ.ವಿ. ಪ್ರಕಾಶ, ತಹಶೀಲ್ದಾರ್ ಡಾ.ಶಿವಕುಮಾರ ಬಿರಾದಾರ್, ಜೈನ ಸಮುದಾಯದ ಅಧ್ಯಕ್ಷ ನಾಭಿರಾಜ್, ಬಿಳಿಚೋಡು ಪದ್ಮನಾಭ, ಮಹಾವೀರ, ಸುರೇಶ, ಎಂ. ಅರುಣ, ಯು.ಪಿ. ನಾಗರಾಜ, ಪ್ರಸನ್ನಕುಮಾರ, ಜಿ. ಅಶೋಕ, ಗೌತಮಚಂದ್, ವಿಜಯರಾಜ, ರಾಖೇಶ, ಹನುಮಾನಚಂದ್, ಜಯಂತಕುಮಾರ ಜೈನ್, ಶಾಂತಕುಮಾರ ಜೈನ್, ಇಜಾರಿ ರಾಯಪ್ಪ ಸೇರಿದಂತೆ ಇತರರು ಇದ್ದರು.

# ಅಮೆರಿಕದ ಮಾಜಿ ಅಧ್ಯಕ್ಷ ಟ್ರಂಪ್ ಬಂಧನ

**(1ನೇ ಪುಟದಿಂದ)** ಟ್ರಂಪ್ ವಿರುದ್ಧ ದೋಷಾರೋಪ ಮಾಡಲು ಮ್ಯಾನ್‌ಹ್ಯಾಟನ್ ಜ್ಯೂರಿ ಕಳೆದ ವಾರ ನಿರ್ಧರಿಸಿತ್ತು. ಆದರೆ, ಟ್ರಂಪ್ ತಮ್ಮ ವಿರುದ್ಧದ ಆರೋಪಗಳನ್ನು ತಳ್ಳಿ ಹಾಕಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಟ್ರಂಪ್ ಅವರು ಮ್ಯಾನ್‌ಹ್ಯಾಟನ್ ನ್ಯಾಯಾಲಯದ ಎದುರು ಹಾಜರಾದ ನಂತರ ಅವರನ್ನು ಬಂಧಿಸಲಾಗಿದೆ. ಇದರೊಂದಿಗೆ ಬಂಧನಕ್ಕೊಳಗಾದ ಮೊದಲ ಅಮೆರಿಕದ ಮಾಜಿ ಅಧ್ಯಕ್ಷ ಅವರಾಗಿದ್ದಾರೆ.

# ಬಹುಮತ ನೀಡಿದರೆ ಲಿಂಗಾಯತ ಸಿಎಂ

**(1ನೇ ಪುಟದಿಂದ)** ಮುಖ್ಯಮಂತ್ರಿ ಯಾಗುತ್ತಾರೆ ಎಂದರು.

ಈ ಚುನಾವಣೆಯಲ್ಲಿ ಕಾಂಗ್ರೆಸ್ 150 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ ಎಂದು ಹೇಳಿದರು.

## ಮಂಜುನಾಥ ಅಡಿಕೆ ನಿಧನ



ಹರಿಹರ ನಗರದ ಎ.ಕೆ.ಕಾಲೋನಿ 3ನೇ ಕ್ರಾಸ್ ನಿವಾಸಿ, ವಿಚಾರ ಸುದ್ದಿ ವಾರ ಪತ್ರಿಕೆ ಸಂಪಾದಕರಾಗಿದ್ದ ಮಂಜುನಾಥ ಅಡಿಕೆ (58) ಇವರು ದಿನಾಂಕ : 4.4.2023ರ ಮಂಗಳವಾರ ರಾತ್ರಿ 8.15ಕ್ಕೆ ನಿಧನರಾದರು. ಪತ್ನಿ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 5.04.2023ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಹರಿಹರ ನಗರದ ಪರಿಶಿಷ್ವರ ರುದ್ರಭೂಮಿಯಲ್ಲಿ ನೆರವೇರಲಿದೆ.

# ಮದುವೆಗೆ ಕೊಟ್ಟಿದ್ದ ಹೋಂ ಥಿಯೇಟರ್ ಸ್ಫೋಟ : ಮದುಮಗನ ಸಾವು

ರಾಯಪುರ, ಏ. 4 – ಮದುವೆಗೆ ಕೊಡುಗೆಯಾಗಿ ನೀಡಲಾದ ಹೋಂ ಥಿಯೇಟರ್ ಸ್ಫೋಟಗೊಂಡು ನವ ವಿವಾಹಿತ ಹಾಗೂ ಅವರ ಅಣ್ಣ ಮೃತಪಟ್ಟ ಘಟನೆ ಛತ್ತೀಸ್‌ಘಡದ ಕಬೀರ್‌ಧಾಮ್ ಜಿಲ್ಲೆಯ ಚಮರಿ ಎಂಬ ಹಳ್ಳಿಯಲ್ಲಿ ನಡೆದಿದೆ.

ಸ್ಫೋಟಕವನ್ನು ಮೊದಲೇ ಹೋಂ ಥಿಯೇಟರ್‌ನಲ್ಲಿ ಅಳವಡಿಸಿದ ಶಂಕೆ ಇದೆ ಎಂದು ಕಬೀರ್‌ಧಾಮ್ ಪೊಲೀಸ್ ವರಿಷ್ಠಾಧಿಕಾರಿ ಲಾಲ್ ಉಮೇದ್ ಸಿಂಗ್ ತಿಳಿಸಿದ್ದಾರೆ.

ಹಿಮೇಂದ್ರ ಮೆರಾವಿ (22) ಅವರು ಕಳೆದ ವಾರ ಮದುವೆಯಾಗಿ ದ್ದರು. ಅವರು ಸೋಮವಾರ ಮ್ಯೂಸಿಕ್ ಸಿಸ್ಟಂ ಆನ್ ಮಾಡಿದಾಗ ಸ್ಫೋಟ ಸಂಭವಿಸಿದೆ. ಸ್ಫೋಟದ ತೀವ್ರತೆಯಿಂದಾಗಿ ಗೋಡೆಗಳು ಹಾಗೂ ತಾರಸಿ ಕುಸಿದಿವೆ ಎಂದು ಸಿಂಗ್ ತಿಳಿಸಿದ್ದಾರೆ.

ಮೆರಾವಿ ಅವರು ಮಾರ್ಚ್ 30 ರಂದು ಮದುವೆಯಾಗಿದ್ದರು. ಸಂಪ್ರ ದಾಯದಂತೆ ನವವಧು ಮರುದಿನ ತಮ್ಮ ತವರು ಮನೆಗೆ ಹೋಗಿದ್ದರು.

ಮೆರಾವಿ ಹಾಗೂ ಕುಟುಂಬದ ಇತರೆ ಸದಸ್ಯರು ಮದುವೆಗೆ ಬಂದ ಕೊಡುಗೆಗಳನ್ನು ಪರಿಶೀಲಿಸುತ್ತಿದ್ದರು. ಆಗ ಮೆರಾವಿ ಮ್ಯೂಸಿಕ್ ಸಿಸ್ಟಂ ಅನ್ನು ಆನ್ ಮಾಡಿದಾಗ ಸ್ಫೋಟ ಸಂಭವಿಸಿ, ಮೆರಾವಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

**ನಕಲಿ ಉಪಕರಣದಲ್ಲಿ ಮೊದಲೇ ಸ್ಫೋಟಕ ಇರಿಸಲಾಗಿತ್ತು ಎಂಬುದು ತನಿಖೆಯಿಂದ ಬಯಲು**

ಸ್ಫೋಟದಲ್ಲಿ ಅವರ ಅಣ್ಣ ರಾಜಕುಮಾರ್ (30) ಹಾಗೂ ಒಂದೂವರೆ ವರ್ಷದ ಬಾಲಕ ಸೇರಿದಂತೆ ಐವರು ಗಾಯಗೊಂಡಿದ್ದಾರೆ. ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ರಾಜಕುಮಾರ್ ಸಾವನ್ನಪ್ಪಿದ್ದಾರೆ. ಉಳಿದವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ವಿಧಿ ವಿಜ್ಞಾನ ತಂಡಗಳು ಪರಿಶೀಲನೆ ನಡೆಸಿದಾಗ, ಮ್ಯೂಸಿಕ್ ಸಿಸ್ಟಂನಲ್ಲಿ ಸ್ಫೋಟಕ ಅಳವಡಿಸಿದ್ದು ಕಂಡು ಬಂದಿದೆ.

ಮ್ಯೂಸಿಕ್ ಸಿಸ್ಟಂ ಮೇಲೆ ಜನಪ್ರಿಯ ಬ್ರಾಂಡ್ ಒಂದರ ಹೆಸರು ಮುದ್ರಿಸಲಾಗಿದೆ. ಆದರೆ, ಇದು ನಕಲಿ ಸಿಸ್ಟಂ ಎಂದು ಕಂಡು ಬರುತ್ತಿದೆ. ಇದನ್ನು ಯಾರು ಕೊಡುಗೆಯಾಗಿ ಕೊಟ್ಟಿದ್ದಾರೆ ಮತ್ತು ಎಲ್ಲಿಂದ ಖರೀದಿಸಲಾಗಿದೆ ಎಂಬ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

# ಶನೇಶ್ಚರ ಸ್ವಾಮಿಯ ಬಯಲು ಆಲಯದ ದ್ವಾದಶ ಪ್ರತಿಷ್ಠಾನ ಪ್ರತಿಬಿಂಬ ಮಹೋತ್ಸವ



ರಾಣೇಬೆನ್ನೂರು

ರಾಣೇಬೆನ್ನೂರು, ಏ. 4- ದೇಶದ ಎರಡನೇಯ, ರಾಜ್ಯದ ಮೊದಲನೆಯದಾದ ರಾಣೇಬೆನ್ನೂರಿನ ಶನೇಶ್ಚರ ಸ್ವಾಮಿಯ ಬಯಲು ಆಲಯದ ದ್ವಾದಶ ಪ್ರತಿಷ್ಠಾನದ ಪ್ರತಿಬಿಂಬ ಮಹೋತ್ಸವವು ವಿವಿಧ ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ನಗರದಲ್ಲಿ ಪ್ರಥಮ ಬಾರಿಗೆ 593 ದಿನಗಳ ಕಾಲ ನಡೆಯಲಿದೆ ಎಂದು ಪೀಠಾಧಿಪತಿ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಪಂಚಪೀಠಾಧೀಶರ ಮಾರ್ಗದರ್ಶನ, ಲೋಕಕಲ್ಯಾಣ ಹಾಗೂ ಪ್ರಾಚೀನ ಧರ್ಮ-ಪರಂಪರೆಯ ಸಂವರ್ಧನೆಯ ಉದ್ದೇಶದೊಂದಿಗೆ ಅಷ್ಟಬಂಧ ಬ್ರಹ್ಮ ಕಲಶೋತ್ಸವ, ಧರ್ಮ ಮಹಾಯಜ್ಞ, ಹತ್ತು ಹಲವು ಧಾರ್ಮಿಕ ಕಾರ್ಯಕ್ರಮಗಳ ಮೂರು ಮಹಾಮಂಡಲಗಳ ಮಹೋತ್ಸವದ ರಾಷ್ಟ್ರೀಯ ಸಮಿತಿಗೆ, ಶನೇಶ್ಚರ ಸ್ವಾಮಿಯ ವಿಶೇಷ ಕೃಪೆಗೆ ಪಾತ್ರರಾಗುವ ವಿಕಲಾಂಗರು, ಕರ್ನಾಟಕ ಸರ್ಕಾರದ ಹಿರಿಯ ಕೆಎಎಸ್ ಅಧಿಕಾರಿ ವಿಶ್ವನಾಥ ಹಿರೇಮಠ ಅವರು ಅಧ್ಯಕ್ಷರಾಗಿದ್ದಾರೆ.

ಇದೇ ದಿನಾಂಕ 28 ರಿಂದ 2024ರ ನವೆಂಬರ್ 30ರವರೆಗೆ ಪ್ರತಿದಿನ ಪ್ರಾತಃಕಾಲದಿಂದ ಮಹಾಸಂಕಲ್ಪ, ಶ್ರೀ ದುರ್ಗಾ ಸಪ್ತಷತೀ ಪಾರಾಯಣ, ದುರ್ಗಾಮೂರ್ತಿಗೆ ಮಹಾರುದ್ರಾಭಿಷೇಕ, ನವಾಕ್ಷರಿ ಮಂತ್ರ ಹೋಮ, ಶ್ರೀ ರುದ್ರ ಹೋಮ, ಶ್ರೀದೇವಿಗೆ ಮಹಾ ಆರತಿ, ಶ್ರೀ ಚಕ್ರಕ್ಕೆ ಲಲಿತ ಸಹಸ್ರ ನಾಮಾವಳಿ ಸಹಿತ 12 ಕೋಟಿ ಕುಂಕುಮಾರ್ಚನೆ ನಡೆಯಲಿದೆ.

ಮಧ್ಯಾಹ್ನ ವಿಶ್ವ ಗೋಮಾತಾ ಪೂಜೆ, ಆರತಿ, ಲಕ್ಷ ಶ್ರೀ ರುದ್ರ ಪಠಣ, ಶನೇಶ್ಚರ ಸ್ವಾಮಿಗೆ ಮಹಾಭಿಷೇಕ, ಕೋಟಿ ಶಮೀಪತ್ರಿ ಅರ್ಚನೆ, ಸಂಜೆ ಸಂಗೀತಯುಕ್ತ ಮಹಾಮಂಗಳಾರತಿ, ಕೋಟಿ ದೀಪೋತ್ಸವ, ಕೊನೆಯಲ್ಲಿ ಶ್ರೀ ಪಂಚದೀಪ ದುರ್ಗಾ ನಮಸ್ಕಾರ ಪೂಜಾರತಿ ನಡೆಯುವವು.

ಕೊನೆಯ 10 ದಿನ ಅಂದರೆ 2024ರ ನವೆಂಬರ್ 15 ರಿಂದ 24ರವರೆಗೆ ಕಾಶಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಪ್ರತಿದಿನ ಬೆಳಿಗ್ಗೆ ಶ್ರೀ ಆಯುತ ಮಹಾಚಂಡಿಯಾಗ, ಸಂಜೆ ಶ್ರೀ ಸಿದ್ಧಾಂತ ಶಿಖಾಮಣಿ ಅಧ್ಯಾತ್ಮಿಕ ಪ್ರವಚನ ಮತ್ತು ತುಲಾಭಾರ ಕಾರ್ಯಕ್ರಮಗಳು ನಡೆಯುವವು. 25 ರಿಂದ ಪ್ರವಚನದ ಮಂಗಲ, ರಾಷ್ಟ್ರೀಯ ಪುರವಂತಿಕೆ ಮೇಳ, ವಟುಗಳಿಗೆ ಅಯ್ಯಾಚಾರ, ರೈತ ಚೈತನ್ಯ ಜ್ಯೋತಿ ಯಾತ್ರೆ, ಮಾತೃದೀಪ್ತಿ, ಮನುಕುಲ ಸದ್ಭಾವನಾ ಪ್ರಶಸ್ತಿ ಪ್ರದಾನ ನಂತರ ಸ್ವಾಮಿಗೆ ಕೋಟಿ ದೀಪೋತ್ಸವ ನಡೆಯಲಿವೆ ಎಂದು ಶಿವಯೋಗಿ ಶ್ರೀಗಳು ವಿವರಿಸಿದ್ದಾರೆ.

# 60 ಕೆರೆಗೆ ನೀರು ತುಂಬಿಸುವ ಯೋಜನೆ ಉದ್ಘಾಟನೆ ಹಾಸ್ಯಾಸ್ಪದ

## ಕೆಪಿಸಿಸಿ ಸದಸ್ಯರಾದ ಎಂ.ಪಿ. ವೀಣಾ ಮಹಾಂತೇಶ್



ಹರಪನಹಳ್ಳಿ, ಏ.4- ಅಪೂರ್ಣಗೊಂಡಿರುವ ತಾಲ್ಲೂಕಿನ 60 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕಾಮಗಾರಿಗೆ ಶಾಸಕರು ಇತ್ತೀಚೆಗೆ ತರಾತುರಿಯಲ್ಲಿ ಉದ್ಘಾಟನೆ ಮಾಡಿರುವುದು ಹಾಸ್ಯಾಸ್ಪದವಾಗಿದೆ ಎಂದು ಕೆಪಿಸಿಸಿ ಸದಸ್ಯೆ ಎಂ.ಪಿ. ವೀಣಾ ಮಹಾಂತೇಶ್ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಛೇರಿಯಲ್ಲಿ ಜರುಗಿದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು ಅಪೂರ್ಣ ಗೊಂಡಿರುವ ಕಾಮಗಾರಿಯನ್ನು ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಉದ್ಘಾಟನೆ ಮಾಡಿದ್ದಾರೆಯೇ ಹೊರತು, ಕೆಲಸ ಇನ್ನು ಪೂರ್ಣಗೊಂಡಿಲ್ಲ. ಹಾಗಾಗಿ ಶಾಸಕರು ಮಾಡಿರುವುದು ಪ್ರಯೋಗ ಅಷ್ಟೇ ಎಂದು ವ್ಯಂಗ್ಯವಾಡಿದರು.

ಯಾವುದೇ ಯೋಜನೆಯಾಗಿದ್ದರೂ ಅದನ್ನು ಪೂರ್ಣಗೊಳಿಸಿ, ಪ್ರಾಯೋಗಿಕ ಪರೀಕ್ಷೆ ಮಾಡಿ ಉದ್ಘಾಟಿಸಬೇಕಿದೆ. ಆದರೆ 5 ವರ್ಷಗಳ ಕಾಲ ಸುಮ್ಮನಿದ್ದು, ಚುನಾವಣೆ ನೀತಿ ಸಂಹಿತೆ ಜಾರಿಗೂ ಮುನ್ನವೇ ಪ್ರಾಯೋಗಿಕತೆ ಇಲ್ಲದೇ ನೇರವಾಗಿ ಉದ್ಘಾಟಿಸಿರುವುದು ಸರಿಯಲ್ಲ ಎಂದು ದೂರಿದರು.


ಹಲುವಾಗಲು ಗ್ರಾಮದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಪೈಪ್‌ಲೈನ್‌ಗಳೇ ಆಗಿಲ್ಲ. ಇದೇ ರೀತಿಯಾಗಿ ಕಂಚಿಕೇರಿ ಕೆರೆಗೂ ಪೈಪ್‌ಲೈನ್ ಆಗಿರುವುದಿಲ್ಲ. ಕೇವಲ ಬಿಲ್‌ಗಾಗಿ ಉದ್ಘಾಟನೆಯಾಗಿದ್ದು, ಜನರ ತೆರಿಗೆ ಹಣ ದುರುಪಯೋಗ ಪಡಿಸಿಕೊಂಡಂತಾಗುತ್ತದೆ. ಗುತ್ತಿಗೆದಾರರು ಕಾಮಗಾರಿ ಪೂರ್ಣಗೊಳಿಸಬೇಕು ಇಲ್ಲವೇ ಉಳಿದ ಅನುದಾನವನ್ನು ಸರ್ಕಾರಕ್ಕೆ ವಾಪಾಸ್ ನೀಡಬೇಕು ಎಂದು ಆಗ್ರಹಿಸಿದರು.

ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ, ಮಾಜಿ ಉಪ ಮುಖ್ಯಮಂತ್ರಿ ಎಂ.ಪಿ. ಪ್ರಕಾಶ್, ಮಾಜಿ ಸಚಿವ ನಾರಾಯಣದಾಸ್ ಅವರ ಕನಸಾಗಿದ್ದ ಬ್ರಿಡ್ಜ್ ಕಂ ಬ್ಯಾರೇಜ್ ನನಸು ಮಾಡಲು ಇಲಾಖೆಗಳಿಗೆ ಕಾಂಗ್ರೆಸ್ ಶಾಸಕ ದಿ. ಎಂ.ಪಿ. ರವೀಂದ್ರ ಹೋರಾಟ ನಡೆಸಿ 58 ಕೋಟಿ ರೂ. ಅನುದಾನ ಮಂಜೂರು ಮಾಡಿಸಿದ್ದರು. ಈ ಯೋಜನೆಯನ್ನು ಮುಂದುವರೆಸಲು ಹಾಲಿ ಜನಪ್ರತಿನಿಧಿಗಳು ಇಚ್ಛಾಶಕ್ತಿ ತೋರದೇ ಕಾಲಹರಣ ಮಾಡಿದ್ದಾರೆ ಎಂದು ಆರೋಪಿಸಿದರು.

ಮುಖಂಡ ಟಿ.ಹೆಚ್.ಎಂ. ಮಹೇಶ್ ಮಾತನಾಡಿ, ಮಾಜಿ ಶಾಸಕ ಎಂ.ಪಿ. ರವೀಂದ್ರರವರ ಅವಿರತ ಶ್ರಮದಿಂದ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಮೇಲೆ ಒತ್ತಡ ಹೇರಿ 50 ಕೆರೆಗಳಿಗೆ ನೀರು ತುಂಬಿಸುವುದು ಹಾಗೂ ಬ್ರಿಡ್ಜ್ ಕಂ ಬ್ಯಾರೇಜ್‌ಗೆ ಅನುದಾನ ತಂದರು. ಆದರೆ ಈಗಿನ ಶಾಸಕರ ಇಚ್ಛಾಶಕ್ತಿಯ ಕೊರತೆಯಿಂದ ಕೆರೆಗಳಿಗೆ ನೀರು ತುಂಬಿಸದೇ ನದಿಯಲ್ಲಿ ನೀರು ಇಲ್ಲದ ಸಮಯದಲ್ಲಿ 50 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ತರಾತುರಿಯಲ್ಲಿ ಉದ್ಘಾಟನೆ ಮಾಡಿರುವುದು ಸರಿಯಲ್ಲ. 50 ಕೆರೆಗಳಿಗೆ ಸರಿಯಾದ ಪೈಪ್‌ಲೈನ್ ವ್ಯವಸ್ಥೆ ಆಗಿಲ್ಲ. ಪಾಯಿಂಟ್ ಇಲ್ಲದೇ ಇರುವುದು, ಪೈಪುಗಳ ಸೋರಿಕೆ, ಕೆಲವೊಂದು ಕಡೆ ಕಾಮಗಾರಿ ಪೂರ್ಣಗೊಂಡಿದ್ದರೂ ನೀರು ಸರಬರಾಜು ಮಾಡಿಲ್ಲ ಎಂದು ಕಿಡಿ ಕಾರಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಮುಖಂಡರಾದ ಪುರಸಭೆ ಮಾಜಿ ಅಧ್ಯಕ್ಷರಾದ ಕವಿತಾ ವಾಗೀಶ್, ಸಿದ್ಧಲಿಂಗನಗೌಡ, ಬೆಣ್ಣೆ ಬಸಣ್ಣ, ನಾಗರಾಜ, ರಾಜುನಾಯ್ಕ, ಮೂಡ್ಲಪ್ಪ, ದಾದಾಪೀರ್, ಮನೋಜ, ಬಸವರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬಿಜೆಪಿಗೆ ಸಂಪೂರ್ಣ ಬಹುಮತ



ಬೆಂಗಳೂರು, ಏ.4 - ಕಳೆದ ಮೂರ್ನಾಲ್ಕು ದಿನಗಳ ಬೆಳವಣಿಗೆ ಗಮನಿಸಿದರೆ ಬಿಜೆಪಿಗೆ ಸಂಪೂರ್ಣ ಬಹುಮತ ದೊರೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವು ಕ್ಷೇತ್ರಗಳ ಆಶ್ಚರ್ಯಕರ ಫಲಿತಾಂಶ ಬರಲಿದೆ. ಈ ಬಗ್ಗೆ ಕಾರ್ಯಕರ್ತರು ಮತ್ತು ನಾಯಕರಿಗೆ ಆತ್ಮವಿಶ್ವಾಸವಿದೆ ಎಂದರು.

ವಾಸ್ತವಾಂಶ ಆಧರಿಸಿ ಅಭ್ಯರ್ಥಿ ಆಯ್ಕೆಯಾಗಿದೆ. ಇಂದು ರಾಜ್ಯ ಸಮಿತಿಯ ಸಭೆ ಕರೆದಿದ್ದು, ಎರಡು ದಿನಗಳ ಕಾಲ ನಡೆಯಲಿದೆ. ಸಭೆ ಬಳಿಕ ಕೇಂದ್ರಕ್ಕೆ ಅಭ್ಯರ್ಥಿಗಳ ಪಟ್ಟಿ ಕಳುಹಿಸಲಾಗುವುದು. ಏ. 8 ರಂದು ಕೇಂದ್ರದಲ್ಲಿ ಚರ್ಚೆಯಾಗಿ ಪಟ್ಟಿ ಬಿಡುಗಡೆಯಾಗಲಿದೆ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಖಾಸಗಿ ಚಾನಲ್ ಸಂದರ್ಶನವೊಂದರಲ್ಲಿ ಮತ್ತೆ ಮುಖ್ಯಮಂತ್ರಿಯಾಗುವ ಇಚ್ಛೆ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಅವರೇನೋ ಬಯಸಿದ್ದಾರೆ, ಆದರೆ ಜನರ ನಾಡಿ ಮಿಡಿತ ಏನಿದೆಯೋ ಯಾರಿಗೆ ಗೊತ್ತು? ಫಲಿತಾಂಶ ಬಂದ ಮೇಲೆ ಜನರ ಅಭಿಮತ ತಿಳಿಯಲಿದೆ ಎಂದರು.

ಜನರ ಬೆಂಬಲ ಇದ್ದರೆ ಮಾತ್ರ ಶಾಸಕನಾಗಲು ಸಾಧ್ಯ ಎಂದರಲ್ಲದೇ, ಸಿದ್ದರಾಮಯ್ಯ ಅವರು ಹೊಸದೇನು ಹೇಳಿಲ್ಲ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ. ಇಲ್ಲದಿರುವ ಸೀಟಾಗಿ ಗುದ್ದಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕಾಗಿ, ಮುಖ್ಯಮಂತ್ರಿ ಸ್ಥಾನಕ್ಕಾಗಿ ಹೋರಾಡುತ್ತಿದೆ. ಜನರಿಗೆ, ಕರ್ನಾಟಕಕ್ಕೆ ಒಳ್ಳೆಯದು ಮಾಡಬೇಕು ಎಂಬ ಯೋಚನೆ ಮಾಡಿಲ್ಲ ಎಂದು ತಿಳಿಸಿದರು.

ಸಿದ್ದರಾಯಮಯ್ಯ ಹೇಳಿರೋದು ಅಲ್ಲಿ ಆಂತರಿಕವಾಗಿ ನಡೆಯುತ್ತಿರುವ ವಿದ್ಯಮಾನಗಳ ಪ್ರತಿಬಿಂಬ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೋದ ಕಡೆಯಲ್ಲಿ ನಾನೇ ಮುಖ್ಯಮಂತ್ರಿ, ನನಗೆ ಆಶೀರ್ವಾದ ಮಾಡಿ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಸಿದ್ದರಾಮಯ್ಯ ಅವರು ನಾನೇ ಮುಖ್ಯಮಂತ್ರಿ ಎಂದು ಹೇಳುತ್ತಾರೆ. ಮುಖ್ಯಮಂತ್ರಿ ಮಾಡೋದು ಜನ. ಆದರೆ ಜನರ ಮನಸ್ಸಿನಲ್ಲಿ ಇವರಿಬ್ಬರೂ ಇಲ್ಲ. ಡಿ.ಕೆ ಶಿವಕುಮಾರ್ ಮತ್ತು ಸಿದ್ದರಾಮಯ್ಯ ಇಬ್ಬರೂ ಮುಖ್ಯಮಂತ್ರಿ ಸ್ಥಾನದ ಕನಸು ಕಾಣುತ್ತಿದ್ದಾರೆ. ಆ ಕನಸು ನನಸಾಗೋದಿಲ್ಲ ಎಂದರು.

ಶಿವಮೊಗ್ಗದ ಬಿಜೆಪಿ ಮುಖಂಡರಾದ ಆಯನೂರು ಮಂಜುನಾಥ್ ಬಂಡಾಯ, ಶಾಸಕರು ಪಕ್ಷಾಂತರ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, 125 ಶಾಸಕರು ಈಗ ಇದ್ದಾರೆ. ಅದರಲ್ಲಿ ಕೆಲವು ಕಡೆ ಇಬ್ಬರು ಆಕಾಂಕ್ಷಿಗಳು ಇದ್ದಾರೆ. ಅಲ್ಲಿ ಸ್ಥಾನ ದೊರೆಯೋಲ್ಲ ಎಂದು ಕೆಲವರು ಬಿಟ್ಟು ಹೋಗಿದ್ದಾರೆ ಅಷ್ಟೆ. ಇದರಿಂದ ಬಿಜೆಪಿ ಹಾಗೂ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಬಿಜೆಪಿಯಿಂದ ಮತ್ತೆ ಯಾರೂ ಹೋಗಲ್ಲ. ಡಿ.ಕೆ. ಶಿವಕುಮಾರ್ ಸುಮ್ಮನೆ ಹೆಸರುಗಳನ್ನು ತೇಲಿ ಬಿಡುತ್ತಿದ್ದಾರೆ ಅಷ್ಟೆ ಎಂದು ಹೇಳಿದರು.

# ಮಹಿಳೆ ಮದುವೆಯಾಗಿದೆ ಎಂದ ನಂತರ ಅತ್ಯಾಚಾರದ ಎಫ್.ಐ.ಆರ್.ಗೆ ತಡೆ

ನವದೆಹಲಿ, ಏ. 4 – ಬೌದ್ಧ ಸಮಾರಂಭದಲ್ಲಿ ನಾವಿಬ್ಬರೂ ಮದುವೆಯಾಗಿರುವುದಾಗಿ ಮಹಿಳೆ ಹೇಳಿದ ನಂತರ, ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿದ್ದ ಅತ್ಯಾಚಾರದ ಎಫ್.ಐ.ಆರ್.ಗೆ ದೆಹಲಿ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ತೈವಾನ್‌ನಲ್ಲಿ ವ್ಯಕ್ತಿಯ ಜೊತೆ ಬೌದ್ಧ ಸಂಪ್ರದಾಯದ ರೀತಿ ಮದುವೆಯಾಗಿರುವುದಾಗಿ ಮಹಿಳೆ ತಿಳಿಸಿದ್ದಾರೆ. ಆ ವ್ಯಕ್ತಿಯ ಜೊತೆ ಮದುವೆಯಾಗಿರುವುದರ ಆಧಾರದ ಮೇಲೆ ಹಲವು ಹೇಳಿಕೆಗಳನ್ನು ದಾಖಲಿಸಿದ್ದಾರೆ. ನಂತರ ಅದೇ ವ್ಯಕ್ತಿಯ ವಿರುದ್ಧ ಅತ್ಯಾಚಾರದ ದೂರು ದಾಖಲಿಸಿದ್ದಾರೆ ಎಂಬುದನ್ನು ನ್ಯಾಯಾಲಯ ಪರಿಗಣಿಸಿದೆ.

ಪೊಲೀಸರಲ್ಲಿ ದೂರು ದಾಖಲಿಸಿದ್ದ ಮಹಿಳೆಯೊಬ್ಬರು, ಮದುವೆ ಮಾಡಿಕೊಳ್ಳುವುದಾಗಿ ಹೇಳಿ ತನಗೆ ಮೋಸ ಮಾಡಲಾಗಿದೆ. ಈ ಸಂಬಂಧದಿಂದ ತನಗೊಂದು ಮಗುವಾಗಿದೆ ಎಂದು ತಿಳಿಸಿದ್ದರು.

ಡಿಸೆಂಬರ್ 2018ರಲ್ಲಿ ತೈವಾನ್‌ನಲ್ಲಿ ಬೌದ್ಧ ಸಂಪ್ರದಾಯದಂತೆ ಮದುವೆ ನಡೆದಿತ್ತು. ಸಮಾರಂಭದಲ್ಲಿ ನಿಕಟ ಸ್ನೇಹಿತರು ಉಪಸ್ಥಿತರಿದ್ದರು. ಆದರೆ, ಮದುವೆಯಾಗಿದ್ದನ್ನು ನಂತರ ನಿರಾಕರಿಸಲಾಗುತ್ತಿದೆ ಎಂದು ಮಹಿಳೆ ದೂರಿದ್ದರು.

ಅತ್ಯಾಚಾರ, ವಂಚನೆ, ಹಿಂಬಾಲಿಸುವಿಕೆ ಹಾಗೂ ಕಾನೂನು ಬಾಹಿರವಾಗಿ ನಿರ್ಬಂಧಿಸಿದ್ದೂ ಸೇರಿದಂತೆ, ಹಲವು ಕಾರಣಗಳಿಗಾಗಿ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸುವಂತೆ ಅವರು ದೂರು ಸಲ್ಲಿಸಿದ್ದರು.

ಆರಂಭದಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಪ್ರಕರಣ ದಾಖಲಿಸಿಕೊಳ್ಳಲು ನಿರಾಕರಿಸಿತ್ತು. ನಂತರ ಸೆಷನ್ಸ್ ನ್ಯಾಯಾಲಯ ಎಫ್.ಐ.ಆರ್. ದಾಖಲಿಸಲು ಆದೇಶಿಸಿತ್ತು. ನಂತರ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು.

ಇವರಿಬ್ಬರೂ ಕಾನೂನು ಬದ್ಧವಾಗಿ ಮದುವೆಯಾಗಿದ್ದಾರೆ. ಜೀವನಾಂಶಕ್ಕೆ ಸಂಬಂಧಿಸಿದಂತೆ ತಗಾದೆ ಹುಟ್ಟಿಕೊಂಡಿದೆ. ಮಗುವಿನ ಹೊಣೆ ಯಾರಿಗೆ ನೀಡಬೇಕು ಎಂಬ ಬಗ್ಗೆಯೂ ತಗಾದೆ ಇದೆ ಎಂಬುದನ್ನು ಹೈಕೋರ್ಟ್ ಪರಿಗಣಿಸಿದೆ.

ವ್ಯಕ್ತಿಯ ಪರವಾಗಿ ವಾದ ಮಂಡಿಸಿದ ವಕೀಲರು, ಜುಲೈ 11, 2022ರಂದು ಅತ್ಯಾಚಾರದ ಪ್ರಕರಣ ದಾಖಲಿಸಲಾಗಿದೆ. ಇದು ದುರುದ್ದೇಶದ ದೂರು ಎಂದು ಹೇಳಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್, ಸಾಮಾನ್ಯವಾಗಿ ಸಂಜ್ಞೇಯ ಅಪರಾಧಗಳಿಗೆ ಸಂಬಂಧಿಸಿದಂತೆ ಎಫ್.ಐ.ಆರ್. ದಾಖಲಿಸಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ದೂರಿನ ಬಗ್ಗೆ ಮೂಲಭೂತ ಅನುಮಾನಗಳಿವೆ. ಕಾನೂನು ಬದ್ಧವಾಗಿ ಮದುವೆಯಾಗಿರುವುದಾಗಿ ಮಹಿಳೆಯೇ ಆರೋಪಿಸಿದ್ದಾರೆ ಎಂದು ನ್ಯಾಯಾಲಯ ತಿಳಿಸಿದೆ.

ಹೀಗಿರುವಾಗ ಎಫ್.ಐ.ಆರ್. ದಾಖಲಿಸಿದರೆ ವ್ಯಕ್ತಿಗೆ ಕಳಂಕ ತಗಲುತ್ತದೆ. ವ್ಯಕ್ತಿ ಇತರೆ ಕಾನೂನು ತೊಡಕುಗಳಲ್ಲೂ ಸಿಲುಕುತ್ತಾರೆ. ಹೀಗಾಗಿ ಎಫ್.ಐ.ಆರ್. ತಡೆಯುವುದಾಗಿ ಹೈಕೋರ್ಟ್ ಹೇಳಿದೆ.

# ಚುನಾವಣೆಗೆ ಸ್ಪರ್ಧಿಸುವುದಿಲ್ಲ

## ಶಾಸಕಿ ಅನಿತಾ ಕುಮಾರಸ್ವಾಮಿ ಸ್ಪಷ್ಟನೆ

ಬೆಂಗಳೂರು, ಏ. 4 - ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರಶ್ನೆ ಇಲ್ಲ ಎಂದು ರಾಮನಗರ ಶಾಸಕಿ ಅನಿತಾ ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಅನಿತಾ ಕುಮಾರಸ್ವಾಮಿ ಅವರು ಮತ್ತೆ ಚುನಾವಣೆಗೆ ಸ್ಪರ್ಧಿಸುತ್ತಾರೆ ಎನ್ನುವ ರೀತಿಯಲ್ಲಿ ಹಬ್ಬಿಸಲಾಗುತ್ತಿರುವ ವದಂತಿಗಳ ಬಗ್ಗೆ ಈ ಪ್ರತಿಕ್ರಿಯೆ ನೀಡಿದ್ದಾರೆ.



ಪ್ರಸಕ್ತ ವಿಧಾನಸಭೆ ಚುನಾವಣೆಯಲ್ಲಿ ನಾನು ಸ್ಪರ್ಧಿಸುತ್ತೇನೆಂಬ ವದಂತಿಗಳನ್ನು ಕೆಲವರು ವ್ಯವಸ್ಥಿತವಾಗಿ ಹಬ್ಬಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ, ಇದು ಶುದ್ಧ ಸುಳ್ಳು ಮತ್ತು ಅಪಪ್ರಚಾರದ ಭಾಗವಷ್ಟೇ. ಮತ್ತೊಮ್ಮೆ ನಾನು ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ. ಈ ಹಿಂದೆಯೇ ಸ್ಪಷ್ಟಪಡಿಸಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ರಾಮನಗರ ಕ್ಷೇತ್ರವನ್ನು ನನ್ನ ಪುತ್ರ ನಿಖಿಲ್ ಕುಮಾರಸ್ವಾಮಿ ಅವರಿಗೆ ಬಿಟ್ಟುಕೊಟ್ಟಿದ್ದೇನೆ. ಪುನಃ ಸ್ಪರ್ಧಿಸುವ ಮಾತೆಲ್ಲಿ? 2008ರಲ್ಲಿ ಆಪರೇಷನ್ ಕಮಲದ ಉಪ ಚುನಾವಣೆಯಲ್ಲಿ ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡರ ಅವರ ಆದೇಶ ಗೌರವಿಸಿ ಸ್ಪರ್ಧಿಸಿದ್ದೆ. ಆ ನಂತರದ ಚುನಾವಣೆಯಲ್ಲಿ ವೀರಭದ್ರಯ್ಯ ಅವರಿಗೆ ಮಧುಗಿರಿ ಕ್ಷೇತ್ರವನ್ನು ಸಂತೋಷದಿಂದ ಬಿಟ್ಟುಕೊಟ್ಟು ಪಕ್ಷದ ಕೆಲಸ, ಮನೆಗಷ್ಟೇ ಸೀಮಿತವಾದೆ ಎಂದಿದ್ದಾರೆ.

2013ರಲ್ಲಿ ಕೂಡ ಕಾರ್ಯಕರ್ತರ ಒತ್ತಡಕ್ಕೆ ತಲೆಕೊಟ್ಟು ಚನ್ನಪಟ್ಟಣದಲ್ಲಿ ಸ್ಪರ್ಧಿಸಬೇಕಾಯಿತು. ಆಗಲೂ ನಾನು ಪಕ್ಷ ಹಾಗೂ ವರಿಷ್ಠರ ಆದೇಶವನ್ನಷ್ಟೇ ಪಾಲಿಸಿದೆ ಎಂದು ಅವರು ಹೇಳಿದ್ದಾರೆ.

2018ರ ಉಪ ಚುನಾವಣೆ ವೇಳೆ ರಾಮನಗರ ಕ್ಷೇತ್ರದಲ್ಲಿ ಕೆಲವರು ನಮ್ಮ ಪಕ್ಷದ ಬೆನ್ನಿಗೆ ಇರಿಯುವ ಕೃತ್ಯವೆಸಗಿದಾಗ ಮತ್ತೆ ಜೆಡಿಎಸ್ ಪಕ್ಷ, ದೇವೇಗೌಡ ಅವರು, ಕುಮಾರಸ್ವಾಮಿ ಅವರ ಆದೇಶದ ಮೇರೆಗೆ ರಾಮನಗರ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದೆ ಎಂದಿರುವ ಅವರು, ಹೀಗೆ ಪಕ್ಷ ಹಾಗೂ ವರಿಷ್ಠರ ಆದೇಶವನ್ನು ಶಿರಸಾ ಪಾಲಿಸಿದ್ದೇನೆ ಎಂದರು.

# ಕರುಣಾ ಧಾಮ ಸೇವಾ ಟ್ರಸ್ಟ್‌ನಿಂದ 'ಸ್ಫೂರ್ತಿ ದಿನ'



ದಾವಣಗೆರೆ, ಏ. 4- ನಗರದ ಶ್ರೀ ಕರುಣಾಧಾಮ ಸೇವಾ ಟ್ರಸ್ಟ್ ವತಿಯಿಂದ ನಟ ಪುನೀತ್ ರಾಜ್‌ಕುಮಾರ್ ಅವರ ಜನ್ಮ ದಿನವನ್ನು ಸ್ಫೂರ್ತಿ ದಿನವನ್ನಾಗಿ ಆಚರಿಸಲಾಯಿತು. ಹಸಿದವರಿಗೆ ಅನ್ನ ಕೊಟ್ಟರೆ ದೇವರಿಗೆ ಸಾಲ ಕೊಟ್ಟಂತೆ ಎಂಬ ನುಡಿಯಂತೆ ಇಂದು ಬೀದಿಯಲ್ಲಿರುವ ನಿರಾಶ್ರಿತರು, ಅಂಗವಿಕಲರು, ಅನಾಥರು, ಭಿಕ್ಷುಕರಿಗೆ ಉಪಹಾರ ಮತ್ತು ನೀರಿನ ಬಾಟಲ್ ಕೊಡುವುದರ ಮುಖಾಂತರ ವಿಶೇಷವಾಗಿ ಸ್ಫೂರ್ತಿ ದಿನಾಚರಣೆ ಆಚರಿಸಲಾಯಿತು.

ಹಾಗೂ ಹರಿಹರ ನಗರದ ಶಿಬಾರದಲ್ಲಿ ಒಬ್ಬ ಬಡ ಮಹಿಳೆಗೆ ಉದ್ಯಮಶೀಲ ಮಹಿಳೆಯಾಗಲು ಹೊಲಿಗೆ ಯಂತ್ರ ಕೊಡುವುದರ ಮುಖಾಂತರ ಇನ್ನೊಬ್ಬರಿಗೆ ಸ್ಫೂರ್ತಿದಾಯಕ ಕಾರ್ಯ ಮಾಡಿದ ಶ್ರೀ ಕರುಣಾಧಾಮ ಸೇವಾ ಟ್ರಸ್ಟ್ ನ ಕಾರ್ಯವನ್ನು ನೆರೆದವರು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟಿಗಳಾದ ಅಶೋಕ್ ರಾಜ್ ಕೆ.ಸಿ., ಕೇಶವಮೂರ್ತಿ ಕೆ.ಸಿ, ಎಸ್. ಅಮಿತಾ, ಎಸ್.ಐ. ವಿನಯ್, ಸ್ನೇಹಿತರಾದ ಮಲ್ಲಿಕಾರ್ಜುನ ಮೂರ್ತಿ, ಚಂದ್ರಶೇಖರ್ ಕರ್ಜಗಿ, ರಾಜು, ಮೂರ್ತಿ ಬಾಬು, ಮುಕ್ಕಣ್ಣ ಶ್ಯಾವಿ ಉಪಸ್ಥಿತರಿದ್ದರು.

# ನಾಥು ಲಾದಲ್ಲಿ ಹಿಮಪಾತ, ಏಳು ಪ್ರವಾಸಿಗರ ಸಾವು

ಗ್ಯಾಂಗ್‌ಟಾಕ್, ಏ. 4 – ಸಿಕ್ಕಿಂನ ನಾಥು ಲಾ ಪ್ರದೇಶದಲ್ಲಿ ಭಾರೀ ಹಿಮಪಾತ ಸಂಭವಿಸಿ ಏಳು ಪ್ರವಾಸಿಗರು ಮೃತಪಟ್ಟಿದ್ದಾರೆ ಮತ್ತು 11 ಇತರರು ಗಾಯಗೊಂಡಿದ್ದಾರೆ.

ಗಾಯಗೊಂಡವರನ್ನು ಗ್ಯಾಂಗ್ಟಕ್ ಆಸ್ಪತ್ರೆಗೆ ದಾಖಲಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನಾಥು ಲಾ ಹಿಮಾಲಯ ಭಾಗದ ಪ್ರಮುಖ ಪ್ರವಾಸಿ ತಾಣವಾಗಿದೆ.

ಮಂಗಳವಾರ ಬೆಳಗಿನ ಜಾವ ಇಲ್ಲಿ ಹಿಮಪಾತ ಸಂಭವಿಸಿದೆ. ನಂತರದಲ್ಲಿ 350 ಜನರು ಅತಂತ್ರರಾಗಿದ್ದರು. ಅವರನ್ನು ರಕ್ಷಿಸಿ ಕರೆ ತರಲಾಗಿದೆ.

# ಸಲಿಂಗ ವಿವಾಹ ಮಾನ್ಯತೆಗೆ ವಿರೋಧ

ನವದೆಹಲಿ, ಏ. 4 – ಸಲಿಂಗ ಮದುವೆಗೆ ಕಾನೂನು ಸಿಂಧುತ್ವ ನೀಡುವುದನ್ನು ಆರ್.ಎಸ್.ಎಸ್. ನಿಕಟವರ್ತಿ ಪ್ರಕಾಶನ 'ಆರ್ಗನೈಸರ್' ವಿರೋಧಿಸಿದ್ದು, ವೈವಾಹಿಕ ವಿಷಯಗಳಿಗೆ ಸಂಬಂಧಿಸಿದಂತೆ ಭಾರತೀಯತೆಯೇ ಕೇಂದ್ರವಾಗಿರಬೇಕು ಎಂದು ತಿಳಿಸಿದೆ.

ಸಲಿಂಗ ಸಂಬಂಧಗಳನ್ನು ಮದುವೆ ಜೊತೆ ಹೋಲಿಕೆ ಮಾಡುವುದು ಅತಿಯಾಗುತ್ತದೆ. ಭಾರತೀಯ ಸಂಪ್ರದಾಯದ ಪ್ರಕಾರ ಮದುವೆಯು ಯಾವುದೇ ಕಾನೂನು ಒಪ್ಪಂದಕ್ಕಿಂತ ಮಿಗಿಲಾಗಿದೆ. ವೈವಾಹಿಕ ವಿಷಯಗಳನ್ನು ನಿರ್ಧರಿಸುವಾಗ ಭಾರತೀಯತೆಯನ್ನೇ ಕೇಂದ್ರವಾಗಿ ಪರಿಗಣಿಸಬೇಕು ಎಂದು ಸಂಪಾದಕ ಪ್ರಫುಲ್ಲ ಕೇಟ್ಕರ್ ಬರೆದಿರುವ ಲೇಖನದಲ್ಲಿ ತಿಳಿಸಲಾಗಿದೆ.

ಸಲಿಂಗ ಮದುವೆಗೆ ಕಾನೂನು ಮಾನ್ಯತೆ ನೀಡಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಾಗಿದ್ದು, ಈ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ.

# ವಾಲ್ಮೀಕಿ ಸಮಾಜದ ಏಳಿಗೆಗೆ ಪುಣ್ಯಾನಂದಪುರಿ ಶ್ರೀ ಶ್ರಮ ಅಧಿಕ



ಹರಿಹರ, ಏ. 4 - ನಾಡಿನಾದ್ಯಂತ ಇರುವ ವಾಲ್ಮೀಕಿ ಜನಾಂಗದ ಏಳಿಗೆಗಾಗಿ ಶ್ರೀ ಪುಣ್ಯಾನಂದಪುರಿ ಮಹಾಸ್ವಾಮಿಗಳು ಜೀವದ ಹಂಗು ತೊರೆದು ಸಂಘಟನೆಗೆ ಶ್ರಮಿಸಿದ್ದರ ಫಲವಾಗಿ ಇಂದು ವಾಲ್ಮೀಕಿ ಪೀಠವು ಬೃಹತ್ ಪ್ರಮಾಣದಲ್ಲಿ ಏಳಿಗೆಯನ್ನು ಕಾಣುವಂತಾಗಿದೆ ಎಂದು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಬಿ. ಮಂಜುನಾಥ್ ಕಾಳೇರ್ ತಿಳಿಸಿದರು.

ನಗರದ ವಾಲ್ಮೀಕಿ ಸಮಾಜದ ವತಿಯಿಂದ ವಾಲ್ಮೀಕಿ ಗುರು ಪೀಠದ ಪ್ರಥಮ ಜಗದ್ಗುರು ಶ್ರೀ ಪುಣ್ಯಾನಂದಪುರಿ ಮಹಾಸ್ವಾಮಿಗಳ ಜನ್ಮ ದಿನದ ಅಂಗವಾಗಿ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು, ಹಣ್ಣು-ಹಂಪಲು ವಿತರಣೆ ಮತ್ತು ಕಚೇರಿಯಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಶ್ರೀ ಪುಣ್ಯಾನಂದಪುರಿ ಮಹಾಸ್ವಾಮಿಗಳು ಶೋಷಣೆಗೆ ಒಳಗಾಗಿದ್ದ ವಾಲ್ಮೀಕಿ ಸಮಾಜದ ಭಕ್ತರನ್ನು ಸಂಘಟಿಸುತ್ತಾ ಏಳಿಗೆಗಾಗಿ ಶ್ರಮಿಸಿದ್ದರ ಫಲವಾಗಿ ಇಂದು ವಾಲ್ಮೀಕಿ ಗುರುಪೀಠ ಬೆಳೆದಿದೆ. ಈಗಿರುವ ಜಗದ್ಗುರು ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮಿಗಳು ಸಹ ಶ್ರೀ ಪುಣ್ಯಾನಂದ ಮಹಾಸ್ವಾಮಿಗಳು ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಸಮಾಜಕ್ಕೆ ಕೊಡುಗೆ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಡಾ. ಸವಿತಾ, ವಾಲ್ಮೀಕಿ ಗುರುಪೀಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ವಾಲ್ಮೀಕಿ ಸಮಾಜದ ಮುಖಂಡರಾದ ಮಕರಿ ಪಾಲಕ್ಷಪ್ಪ, ಆಟೋ ರಾಜು, ಧನರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದಿಂದ ವಿದ್ಯಾರ್ಥಿ ಧ್ವನಿ ಸಂವಾದ

ದಾವಣಗೆರೆ, ಏ. 4- ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ನಗರದ ಬಾಪೂಜಿ ಎಂ.ಬಿ.ಎ ಕಾಲೇಜಿನಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳೊಂದಿಗೆ ವಿದ್ಯಾರ್ಥಿ ಧ್ವನಿ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ರಾಜ್ಯ ಅಧ್ಯಕ್ಷ ಕೀರ್ತಿ ಗಣೇಶ್, ರಾಷ್ಟ್ರೀಯ ಕಾರ್ಯದರ್ಶಿ ಮಮತ ನೇರ್ಲಿಗೆ ಅವರು ವಿದ್ಯಾರ್ಥಿಗಳ ಜೊತೆ ವಿವಿಧ ವಿಚಾರಗಳ ಬಗ್ಗೆ ಸಂವಾದ ನಡೆಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಕಾಂಗ್ರೆಸ್ ಪಕ್ಷ ವಿದ್ಯಾರ್ಥಿಗಳಿಗೆ ಅನೇಕ ಸೌಲಭ್ಯಗಳನ್ನು ನೀಡುತ್ತಾ ಬಂದಿದ್ದು, ಎನ್‌ಎಸ್‌ಯುಐನಲ್ಲಿ ತೊಡಗಿಕೊಂಡ ಹಿಂದಿನ ಹಲವಾರು ಮುಖಂಡರು ಉನ್ನತ ಸ್ಥಾನಮಾನಗಳಿಸಿದ್ದಾರೆ ಎಂದರು.

ಇದೇ ವೇಳೆ ಮಾಜಿ ಸಂಸದ ಧ್ರುವನಾರಾಯಣ ಅವರಿಗೆ ಗೌರವ ಸಲ್ಲಿಸಲಾಯಿತು.

ಜವಾಹರ್ ಬಾಲ್ ಮಂಚ್ ರಾಜ್ಯ ಅಧ್ಯಕ್ಷ ಮೈನುದ್ದೀನ್, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸಾಗರ್ ಎಲ್. ಹೆಚ್., ಎನ್‌ಎಸ್‌ಯುಐ ಜಿಲ್ಲಾ ಅಧ್ಯಕ್ಷ ರಹಮತ್ ಪೈಲ್ವಾನ್ ಹಾಗೂ ಇತರರು ಉಪಸ್ಥಿತರಿದ್ದರು.



# ಮಲೇಬೆನ್ನೂರು : ಶಾಲೆಗೆ ಡೆಸ್ಕ್ ವಿತರಣೆ



ಮಲೇಬೆನ್ನೂರು,ಏ.4- ಇಲ್ಲಿನ ಪಿಡಬ್ಲ್ಯೂಡಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಂಜೂರಾಗಿ ಬಂದಿರುವ 10 ಡೆಸ್ಕ್ ಮತ್ತು ಬೆಂಚ್‌ಗಳನ್ನು ಯೋಜನೆಯ ಸಮುದಾಯ ವಿಭಾಗದ ಪ್ರಾದೇಶಿಕ ನಿರ್ದೇಶಕ ಆನಂದ್ ಸುವರ್ಣ ಅವರು ಹಸ್ತಾಂತರ ಮಾಡಿದರು.

ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಸಮುದಾಯ ವಿಭಾಗದ ಯೋಜನಾಧಿಕಾರಿ ಪುಷ್ಪರಾಜ್, ಕೆರೆ ಅಭಿವೃದ್ಧಿ ಇಂಜಿನಿಯರ್ ಮಂಜುನಾಥ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ರಕ್ಷಿತಾ, ನಿಟ್ಟೂರು ವಲಯದ ಮೇಲ್ವಿಚಾರಕ ಚಂದ್ರಪ್ಪ, ಸೇವಾ ಪ್ರತಿನಿಧಿ ನಾಗರತ್ನ, ಒಕ್ಕೂಟದ ಅಧ್ಯಕ್ಷೆ ಶೋಭಾರಾಣಿ, ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಹಾಗೂ ಶಾಲಾ ಮುಖ್ಯ ಶಿಕ್ಷಕ ಎಸ್.ಜಿ. ನಿರಂಜನ್, ಶಿಕ್ಷಕ ಬಿ.ಹೆಚ್. ಶಿವಕುಮಾರ್ ಮತ್ತು ಶಿಕ್ಷಕರು, ಎಸ್‌ಡಿಎಂಸಿ ಪದಾಧಿಕಾರಿಗಳು ಈ ವೇಳೆ ಹಾಜರಿದ್ದರು.

# ಬೇಸಿಗೆಯ ಆರೋಗ್ಯ ಸಮಸ್ಯೆಗಳ ರಕ್ಷಣೆಗೆ ಸಲಹೆ




ದಾವಣಗೆರೆ, ಏ.4 - ಮಾರ್ಚ್ ತಿಂಗಳಿನಿಂದ ಬಿಸಿಲಿನ ಝಳವು ಹೆಚ್ಚಾಗಿದ್ದು ಮುಂದಿನ ದಿನಗಳಲ್ಲಿ ತೀವ್ರ ತಾಪಮಾನ ಉಂಟಾಗುವುದರಿಂದ ಆರೋಗ್ಯ ಸಮಸ್ಯೆಗಳಿಂದ ಎಲ್ಲರೂ ರಕ್ಷಣೆ ಪಡೆಯಬೇಕು ಎಂದು ಆರೋಗ್ಯ ಶಿಕ್ಷಣ ಹಿರಿಯ ಆಡಳಿತ ವೈದ್ಯಾಧಿಕಾರಿಗಳಾದ ಎಲ್.ಡಿ. ಡಾ. ವೆಂಕಟೇಶ್ ಹೇಳಿದರು.

ಕಕ್ಕರಗೊಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ಬೇಸಿಗೆ ದಿನಗಳಲ್ಲಿ ಆರೋಗ್ಯ ರಕ್ಷಣೆ ಕುರಿತು ಸಭೆಯಲ್ಲಿ ಮಾತನಾಡಿದ ಅವರು, ಬಿಸಿಲಿನಿಂದ ಆರೋಗ್ಯವನ್ನು ರಕ್ಷಣೆ ಮಾಡಿಕೊಳ್ಳಲು ಹೆಚ್ಚಾಗಿ ನೀರು ಕುಡಿಯಬೇಕು. ಹಣ್ಣಿನ ರಸ, ಮಜ್ಜಿಗೆ, ಶರಬತ್ ಮತ್ತು ಲಸ್ಸಿಯನ್ನು ಕುಡಿಯುವುದು. ಸಾಧ್ಯವಾದಷ್ಟು ತೆಳುವಾದ ಹತ್ತಿಯ ಬಟ್ಟೆಗಳನ್ನು ಲಘು ಬಣ್ಣದ ಬಟ್ಟೆಗಳನ್ನು ಧರಿಸುವುದು. ಹೊರಗೆ ಹೋಗುವಾಗ ಛತ್ರಿ, ಟೋಪಿ ಮತ್ತು ಟವಲ್‌ಗಳನ್ನು ಬಳಸಬೇಕು ಎಂದರು.

ಮಧ್ಯಾಹ್ನದ ಬಿಸಿಲಿನಲ್ಲಿ ಓಡಾಡುವುದನ್ನು ತಪ್ಪಿಸಬೇಕು, ಅದರಲ್ಲೂ ರಕ್ತದ ಒತ್ತಡ, ಹೃದಯ ಸಮಸ್ಯೆ ಇರುವವರು, ಗರ್ಭಿಣಿಯರು, 65 ವರ್ಷ ಮೇಲ್ಪಟ್ಟವರು ಮತ್ತು ಚಿಕ್ಕ ಮಕ್ಕಳು ಹೆಚ್ಚು ಜಾಗರೂಕತೆಯಿಂದಿರಲು ತಿಳಿಸಿದರು.

# ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ಸಂಭ್ರಮದ ವಾರ್ಷಿಕೋತ್ಸವ



ಹರಿಹರ, ಏ. 4 - ಪೊಲೀಸ್ ಪಬ್ಲಿಕ್ ಶಾಲೆಯು ಪ್ರಾರಂಭವಾಗಿ ಒಂದು ವರ್ಷ ಕಳೆಯುವುದರಲ್ಲೇ ನಿರೀಕ್ಷೆಗೂ ಮೀರಿ ಯಶಸ್ಸನ್ನು ಗಳಿಸುತ್ತಿದೆ. ಸುಂದರ ಪರಿಸರ, ಸುಸಜ್ಜಿತ ಕಟ್ಟಡ, ಉತ್ತಮವಾದ ಬೋಧಕ ವರ್ಗವನ್ನು ಒಳಗೊಂಡು ಕಡಿಮೆ ಶುಲ್ಕದಲ್ಲಿ ಗುಣಾತ್ಮಕ ಶಿಕ್ಷಣ ದೊರೆಯುತ್ತಿದೆ. ಇಲ್ಲಿ ಪಾಠದೊಂದಿಗೆ ಆಟ, ಕಲೆ, ಸಂಗೀತ ಮತ್ತು ಕರಾಟೆಯನ್ನು ಕಲಿಸುವುದರ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಟಿಬದ್ಧವಾಗಿದೆ. ಇದಕ್ಕೆ ಪೊಲೀಸ್ ಇಲಾಖೆಯ ಮತ್ತು ಸರ್ಕಾರದ ಸಂಪೂರ್ಣ ಸಹಕಾರವಿದೆ ಎಂದು ಪೂರ್ವ ವಲಯ ಐಜಿಪಿ ಡಾ ಕೆ. ತ್ಯಾಗರಾಜನ್ ಹೇಳಿದರು.

ಕೊಂಡಜ್ಜಿ ಗ್ರಾಮದ ಪೊಲೀಸ್ ಪಬ್ಲಿಕ್ ಶಾಲೆಯ 'ವಾರ್ಷಿಕೋತ್ಸವ ಪನೋರಮ-2023' ಉದ್ಘಾಟಿಸಿ ಅವರು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ಅವರು ಪೊಲೀಸ್ ಪಬ್ಲಿಕ್ ಶಾಲೆಯ ಉದಯ, ಗುರಿ ಮತ್ತು ಉದ್ದೇಶಗಳ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳ ಶಿಸ್ತು ಮತ್ತು ಸಂಸ್ಕಾರದ ಬೆಳವಣಿಗೆಗೆ ಶಾಲೆಯೊಂದಿಗೆ ಪೋಷಕರ ಸಹಕಾರ ಅತಿ ಅಗತ್ಯ. ವಿದ್ಯಾರ್ಥಿಗಳ ಪ್ರತಿಭೆಯ ಅನಾವರಣಕ್ಕೆ ಈ ಶಾಲಾ ವಾರ್ಷಿಕೋತ್ಸವ ಪೂರಕವಾಗಿದೆ ಎಂದರು.

ವೇದಿಕೆಯಲ್ಲಿ ಜಿಲ್ಲಾ ಪೊಲೀಸ್ ಹೆಚ್ಚುವರಿ ಅಧೀಕ್ಷಕರಾದ ಆರ್.ಬಿ.ಬಸರಗಿ, ಡಿವೈಎಸ್ಪಿ ಟಿ.ಪಿ.ಕೃಷ್ಣಮೂರ್ತಿ, ಹಾವೇರಿ ಡಿವೈಎಸ್ಪಿ ಪಿ. ಬಿ.ಪ್ರಕಾಶ್, ನಿವೃತ್ತ ಎಸ್ಪಿ ರವಿ ನಾರಾಯಣ ಮತ್ತು ಪ್ರಾಂಶುಪಾಲ ಯತೀಶ್.ಹೆಚ್.ವಿ ಉಪಸ್ಥಿತರಿದ್ದರು.

ವಿವಿಧ ವಿಭಾಗಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸೃಷ್ಟಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಶ್ರೀನಿಧಿ-ಪೃಥ್ವಿರಾಜ್ ಸ್ವಾಗತಿಸಿದರು. ಸಮರ್ಥ್- ಕುಶಾಲ್ ವಂದಿಸಿದರು. ಹರ್ಷಿಯ ಮತ್ತು ಗಾನವಿ ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ 'ಪನೋರಮ -2023' ಪೊಲೀಸ್ ಥೀಮ್ ನೊಂದಿಗೆ ಕಥಾ ನಿರೂಪಣೆ ಮತ್ತು ವಿದ್ಯಾರ್ಥಿಗಳ ನೃತ್ಯ ದೃಶ್ಯ ವಿಹಂಗಮದೊಂದಿಗೆ ಪ್ರೇಕ್ಷಕರ ಮನಸೂರೆಗೊಂಡು ಮೆಚ್ಚುಗೆಗೆ ಪಾತ್ರವಾಯಿತು.

# ಪೊಲೀಸ್ ಧ್ವಜ ದಿನಾಚರಣೆ : ರಕ್ತದಾನ ಶಿಬಿರ



ದಾವಣಗೆರೆ, ಏ.4- ಪೊಲೀಸ್ ಧ್ವಜ ದಿನಾಚರಣೆ ಪ್ರಯುಕ್ತ ಜಿಲ್ಲಾ ಪೊಲೀಸ್ ಮತ್ತು ಪೊಲೀಸ್ ಕಲ್ಯಾಣ ಸಮಿತಿ ಹಾಗೂ ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ ಲೈಫ್ ಲೈನ್ ರಕ್ತ ಕೇಂದ್ರದ ಸಹಯೋಗದೊಂದಿಗೆ ಜಿಲ್ಲಾ ಪೊಲೀಸ್ ಕವಾಯತು ಆವರಣದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಜರುಗಿತು.

ಸ್ವಯಂ ಪ್ರೇರಿತ ರಕ್ತದಾನ ಶಿಬಿರಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್ ಅವರು ಸಾಂಕೇತಿಕವಾಗಿ ಚಾಲನೆ ನೀಡಿ, ತಮ್ಮ ಸಿಬ್ಬಂದಿಗಳಿಗೆ ರಕ್ತದಾನ ಮಾಡಲು ಪ್ರೇರೆಪಿಸಿದರು. ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ. ಬಸರಗಿ, ಡಿ.ವೈ.ಎಸ್.ಪಿ ನಾಗರಾಜ್, ಪೊಲೀಸ್ ನಿರೀಕ್ಷಕ ಹೆಚ್.ಬಿ ಸೋಮಶೇಖರಪ್ಪ, ಜಿಲ್ಲಾ ಮೀಸಲು ಪೊಲೀಸ್ ಪಡೆ ಹಾಜರಿದ್ದರು.

ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ರವಿ ನಾರಾಯಣ್ ಅವರು ಸ್ವಯಂ ಪ್ರೇರಿತ ರಕ್ತ ದಾನ ಶಿಬಿರ ಆಯೋಜಿಸಿ, ಅರ್ಥಪೂರ್ಣವಾಗಿ ಆಚರಿಸಲು ನೆರವಾಗಿದ್ದಾರೆ.

ಲೈಫ್‌ಲೈನ್ ರಕ್ತ ನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ಎಮ್.ಎಮ್ ದಡ್ಡಿಕೊಪ್ಪದ್ ಮತ್ತು ರಕ್ತ ಕೇಂದ್ರದ ಸಿಬ್ಬಂದಿಗಳು ಶಿಬಿರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಸ್ವಯಂ ಪ್ರೇರಿತ ರಕ್ತದಾನಿ ವಾಸುದೇವ್ ರಾಯ್ಕರ್ ಮತ್ತು ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ಹಾಗೂ ಜಿಲ್ಲೆಯ ವೃತ್ತ ನಿರೀಕ್ಷಕರು, ಪೊಲೀಸ್ ಸಿಬ್ಬಂದಿಗಳು ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ಭಾಗವಹಿಸಿದ್ದರು.

# ನೈತಿಕ ಮತದಾನ ಕುರಿತು ವಾಣಿಜ್ಯ ತೆರಿಗೆ ಇಲಾಖೆಯಿಂದಲೂ ಜಾಗೃತಿ : ಎಲ್ಲೆಡೆ ತಪಾಸಣೆ

ದಾವಣಗೆರೆ, ಏ. 4- ವಿಧಾನ ಸಭೆ ಚುನಾವಣೆ ಹಿನ್ನೆಲೆಯಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆ (ಸರಕು ಮತ್ತು ಸೇವಾ ತೆರೆ)ಯಿಂದ ನೈತಿಕ ಮತದಾನದ ಬಗ್ಗೆ ಜನರಲ್ಲಿ ಕರ ಪತ್ರಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

ಆಸೆ - ಆಮಿಷಗಳ ಬಲೆಗೆ ಬೀಳಬೇಡಿ, ನಿಮ್ಮ ಮತ ಮಾರಾಟಕ್ಕಿಲ್ಲ ಎಂದು ಮುದ್ರಿಸಿದ ಕರಪತ್ರಗಳನ್ನು ಹಂಚಲಾಗುತ್ತಿದೆ. ನಿರಾಕರಿಸಿ ಉಚಿತ ಉಡುಗೊರೆ, ತೋರಿಸಿ ನಿಮ್ಮ ನೈತಿಕತೆ, ಮುಕ್ತ ಚುನಾವಣೆಯ ಹರಿಕಾರರಾಗಿ ಎಂಬ ಮನವಿಗಳನ್ನು ಮಾಡಿಕೊಳ್ಳಲಾಗುತ್ತಿದ್ದು, ಕರಪತ್ರಗಳನ್ನು ಚೆಕ್‌ಪೋಸ್ಟ್ ಹಾಗೂ ಸರ್ಕಾರಿ ಕಛೇರಿಗಳ ಬಳಿ ಅಂಟಿಸಲಾಗಿದೆ.



ಯಾರಾದರೂ ಉಡುಗೊರೆಗಳನ್ನು ನೀಡಿ ಆಮಿಷ ತೋರುತ್ತಿದ್ದರೆ, ಅಕ್ರಮವಾಗಿ ಸರಕು-ಸಾಮಗ್ರಿಗಳನ್ನು ಸಂಗ್ರಹಿಸುವುದು ಕಂಡು ಬಂದರೆ ಸಾರ್ವಜನಿಕರು ವಾಣಿಜ್ಯ ತೆರಿಗೆ ಉಪ ಆಯುಕ್ತರು ಅಥವಾ ವಾಣಿಜ್ಯ ತೆರಿಗೆ ಅಧಿಕಾರಿಗೆ ಮಾಹಿತಿ ನೀಡಬಹುದು ಎಂದು ಇಲಾಖೆಯ ಅಧಿಕಾರಿಗಳ ಸಂಪರ್ಕ ಸಂಖ್ಯೆಯನ್ನೂ ಹಂಚಿಕೊಂಡಿದೆ.

ಪ್ರತಿನಿತ್ಯ ದಾವಣಗೆರೆ ಜಿಲ್ಲೆಗೆ ಒಳ ಬರುವ ಎಲ್ಲಾ ಸರಕು ವಾಹನಗಳ ಮತ್ತು ಎಲ್ಲಾ ದಾಸ್ತಾನು ಮಳಿಗೆಗಳ ಹಾಗೂ ಚೆಕ್ ಪೋಸ್ಟ್‌ಗಳ ತಪಾಸಣೆ ಮಾಡಲಾಗುತ್ತಿದ್ದು, ಅಕ್ರಮ ಸಾಗಾಣಿಕೆ ಮತ್ತು ದಾಸ್ತಾನು ಬಗ್ಗೆ ಮಾಹಿತಿ ನೀಡುವಂತೆ ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಹಾಗೂ ಚುನಾವಣಾ ನೋಡಲ್ ಅಧಿಕಾರಿ ಹೆಚ್.ಎಸ್. ಮಂಜುನಾಥ್ ತಿಳಿಸಿದ್ದಾರೆ.

ಸಂಪರ್ಕಿಸಬೇಕಾದ ಅಧಿಕಾರಿಗಳ ಮೊಬೈಲ್ ನಂಬರ್‌ಗಳು : ಕಂಟ್ರೋಲ್ ರೂಂ ಸಂಖ್ಯೆ 1800 423 6300, ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು 73383 61777, ಸಹಾಯಕ ಆಯುಕ್ತರು 94494 92998, ವಾಣಿಜ್ಯ ತೆರಿಗೆ ಅಧಿಕಾರಿಗಳಾದ 98459 83464, 97418 09200, 99809 42918.

# ಜಿಲ್ಲಾಡಳಿತದಿಂದ ಶ್ರೀ ಭಗವಾನ್ ಮಹಾವೀರ ಜಯಂತಿ ಸರಳ ಆಚರಣೆ



ದಾವಣಗೆರೆ, ಏ. 4- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಂಗಳವಾರ ಜಿಲ್ಲಾಡಳಿತ ಕಛೇರಿ ಸಭಾಂಗಣದಲ್ಲಿ ಜರುಗಿದ ಭಗವಾನ್ ಶ್ರೀ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಮಹಾವೀರ ತೀರ್ಥಂಕರರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಪುಷ್ಪಾರ್ಚನೆ ಮಡುವ ಮೂಲಕ ಆಚರಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ರವಿ, ಶ್ವೇತಾಂಬರ ಜೈನ್ ಸಂಘದ ಅಧ್ಯಕ್ಷ ಬಿ.ಎಸ್. ಅಜಿತ್, ಉಪಾಧ್ಯಕ್ಷ ನರೇಂದ್ರ ಕುಮಾರ್, ಕಾರ್ಯದರ್ಶಿ ಸುನೀಲ್ ಕುಮಾರ್ ಹಾಗೂ ಇತರರು ಉಪಸ್ಥಿತರಿದ್ದರು.


## 'ಕರುಣಾ'ದಿಂದ ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಬೇಸಿಗೆಯ ಹಿನ್ನೆಲೆಯಲ್ಲಿ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಒಂದು ತಿಂಗಳ ಪರ್ಯಂತ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವೂ ಹಮ್ಮಿಕೊಳ್ಳಲಾಗಿದೆ.

ದಾನಿಗಳ ನೆರವಿನೊಂದಿಗೆ ಮಜ್ಜಿಗೆ ವಿತರಿಸಲಾಗುತ್ತಿದ್ದು, ಸ್ತ್ರೀ ರೋಗ ತಜ್ಞ ಡಾ.ಹೆಚ್.ಎನ್. ಮಲ್ಲಿಕಾರ್ಜುನ್ ಅವರು ಇಂದಿನ ಮಜ್ಜಿಗೆಯ ದಾನಿಗಳಾಗಿದ್ದಾರೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.

ಕರುಣಾ ಜೀವ ಕಲ್ಯಾಣ ಟ್ರಸ್ಟಿನ ಸತ್ಕಾರ್ಯಗಳಾದ ಮಜ್ಜಿಗೆ, ಗಾಡಿ, ಸೈಕಲ್, ನೀರಿನ ಬಾನಿಗಳ ವಿತರಣೆ ಇತ್ಯಾದಿಗಳಿಗೆ ದಾನ ಮಾಡಲಿಚ್ಚಿಸುವರು ಎಂ.ಬಿ. ಮಧುಸೂದನ್ (98806 -02121ಅಥವಾ 95380-24444) ಅವರನ್ನು ಸಂಪರ್ಕಿಸಬಹುದು.

## ನಗರದಲ್ಲಿ ನಾಡಿದ್ದು ಶ್ರೀಮದ್ ಅಥಣಿ ಮುರುಘೇಂದ್ರ ಶಿವಯೋಗಿಗಳವರ ಸ್ಮರಣೆ



ದಾವಣಗೆರೆ ಏ. 4 - ಮಹಾಮಹಿಮರೂ, ತಪಸ್ವಿಗಳೂ ಆಗಿರುವ ಶ್ರೀಮದ್ ಅಥಣಿ ಮುರುಘೇಂದ್ರ ಶಿವಯೋಗಿಗಳವರ 102ನೇ ಸ್ಮರಣೋತ್ಸವ ಕಾರ್ಯಕ್ರಮವನ್ನು ಇದೇ ದಿನಾಂಕ 7ರ ಶುಕ್ರವಾರ ಸಂಜೆ ನಗರದ ಶ್ರೀ ಶಿವಯೋಗಾಶ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ. ಶ್ರೀ ಶಿವಯೋಗಾಶ್ರಮದ ಶ್ರೀ ಬಸವ ಪ್ರಭು ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದ್ದು, ಅಂದು ಉಭಯ ಗದ್ದುಗೆಗಳಿಗೆ ಅಭಿಷೇಕ ನಡೆಯಲಿದೆ. ಸದ್ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಶ್ರೀ ಶಿವಯೋಗೀಶ್ವರ ಭಜನಾ ಸಂಘದ ಸಂಚಾಲಕ ಜೆ. ಸೋಮನಾಥ್ ಕೋರಿದ್ದಾರೆ.

## ಕುಣೆಬೆಳಕೆರೆ : ಸಂಭ್ರಮದ ರಥೋತ್ಸವ



ಮಲೇಬೆನ್ನೂರು, ಏ.4- ಕುಣೆಬೆಳಕೆರೆ ಗ್ರಾಮದ ಶ್ರೀ ವೀರಾಂಜನೇಯ ಸ್ವಾಮಿಯ ರಥೋತ್ಸ ವವು ಇಂದು ಬೆಳಿಗ್ಗೆ ಗ್ರಾಮಸ್ಥರ ಸಮ್ಮುಖ ದಲ್ಲಿ ಸಂಭ್ರಮದಿಂದ ಜರುಗಿತು.

ಸಾಯಂಕಾಲ ನಡೆದ ಮುಳ್ಳೋತ್ಸವ ದಲ್ಲಿ ಭಕ್ತರು ಮುಳ್ಳು ತುಳಿದು ಭಕ್ತಿ ಸಮರ್ಪಿಸಿದರು. ಮುಳ್ಳೋತ್ಸವ ನೋಡಲು ಹೆಚ್ಚಿನ ಜನ ಆಗಮಿಸಿದ್ದರು. ಸಂಜೆ ಓಕಳಿ ನೆರವೇರಿತು. ನಾಳೆ ಬುಧವಾರ ಸಾಯಂ ಕಾಲ ಸಕಲ ದೇವರು ಗಳ ಉತ್ಸವದ ನಂತರ ಭೂತ ಸೇವೆಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.

## ನಾಳೆ ಬೇಸಿಗೆ ಕ್ರಿಕೆಟ್ ತರಬೇತಿ

ದಾವಣಗೆರೆ, ಏ.4- ದಾವಣಗೆರೆ ಕ್ರಿಕೆಟ್ ಅಕಾಡೆಮಿ ವತಿಯಿಂದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರವನ್ನು ನಾಡಿದ್ದು ದಿನಾಂಕ 6ರಿಂದ ಮೇ 6ವರೆಗೆ ನಗರದ ಪ್ರೌಢಶಾಲಾ ಮೈದಾನ ದಲ್ಲಿ ಹಮ್ಮಿಕೊಳ್ಳಲಾಗಿದೆ.

6 ವರ್ಷದಿಂದ 19 ವರ್ಷ ದೊಳಗಿನ ಬಾಲಕ/ಬಾಲಕಿಯರಿಗೆ ಈ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಹೆಸರು ನೋಂದಾಯಿಸಲು ತಿಮ್ಮೇಶ್ (98804 40602), ಹೆಚ್.ಎಂ. ಅಭಿಷೇಕ್ (9380965730) ಅವರನ್ನು ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಮಕ್ಕಳ ಬೇಸಿಗೆ ಶಿಬಿರ

ಜಿಲ್ಲಾ ಶಿಶು ಕಲ್ಯಾಣ ಮಂಡಳಿ ವತಿಯಿಂದ ವನಿತಾ ಸಮಾಜದಲ್ಲಿ ಇಂದಿನಿಂದ ಇದೇ ದಿನಾಂಕ 13 ರವರೆಗೆ ಪ್ರತಿ ದಿನ ಬೆಳಿಗ್ಗೆ 9.30 ರಿಂದ 11.30 ರವರೆಗೆ ಮಕ್ಕಳ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ವಿವರಕ್ಕೆ ಉಷಾ ರಂಗನಾಥ (9986520989), ಸುನೀತಾ ಇಂದೂಧರ (9945056060) ಅವರನ್ನು ಸಂಪರ್ಕಿಸಬಹುದು.

## ನಾಗರಸನಹಳ್ಳಿಯಲ್ಲಿ ಇಂದಿನಿಂದ ವೀರಭದ್ರೇಶ್ವರ ಸ್ವಾಮಿ ರಥೋತ್ಸವ



ದಾವಣಗೆರೆ ತಾಲ್ಲೂಕಿನ ನಾಗರಸನಹಳ್ಳಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ, ಕೆಂಡದಾರ್ಚನೆ ಮತ್ತು ಮಹಾರಥೋತ್ಸವ ಇಂದು - ನಾಳೆ ನಡೆಯಲಿದೆ. ಇಂದು ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮತ್ತು ಉಚ್ಚಾಯ, ಕೆಂಡದಾರ್ಚನೆ ನಡೆಯುತ್ತದೆ. ನಾಳೆ ಗುರುವಾರ ಸಂಜೆ 4 ಗಂಟೆಯಿಂದ ಮಹಾರಥೋತ್ಸವ ನಡೆಯುತ್ತದೆ.

## ಅರುಣಾಚಲ ಭಾಗಗಳ ಮರು ನಾಮಕರಣದ ಚೀನಾ ಕ್ರಮಕ್ಕೆ ಖಂಡನೆ

ನವದೆಹಲಿ, ಏ. 4 – ಅರುಣಾಚಲ ಪ್ರದೇಶದ ಕೆಲ ಭಾಗಗಳಿಗೆ ಚೀನಾ ಮರು ನಾಮಕರಣ ಮಾಡಿದೆ. ಚೀನಾದ ಈ ಕ್ರಮವನ್ನು ಭಾರತ ಖಂಡಿಸಿದ್ದು, ಅರುಣಾಚಲ ಪ್ರದೇಶ ತನ್ನ ಅವಿಭಾಜ್ಯ ಅಂಗ ಎಂದು ಹೇಳಿದೆ. ಅರುಣಾಚಲ ಪ್ರದೇಶ ಟಿಬೆಟ್‌ನ ದಕ್ಷಿಣ ಭಾಗ ಎಂದು ಚೀನಾ ವಾದಿಸುತ್ತಿದೆ. ಇದರ ಮುಂದುವರಿದ ಭಾಗವಾಗಿ 11 ಸ್ಥಳಗಳ ಹೆಸರುಗಳನ್ನು ಬದಲಿಸಿರುವುದಾಗಿ ಹೇಳಿದೆ.

ಚೀನಾದ ಈ ಕ್ರಮವನ್ನು ಖಂಡಿಸಿರುವ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, ಚೀನಾ ಈ ರೀತಿಯ ಯತ್ನ ನಡೆಸುತ್ತಿರುವುದು ಇದೇ ಮೊದಲೇನೂ ಅಲ್ಲ. ಹೆಸರುಗಳ ಆವಿಷ್ಕಾರ ಮಾಡುವುದರಿಂದ ವಾಸ್ತವ ಬದಲಾಗುವುದಿಲ್ಲ ಎಂದಿದ್ದಾರೆ. ಈ ಹಿಂದೆ 2017 ಹಾಗೂ 2021ರಲ್ಲೂ ಸಹ ಅರುಣಾಚಲ ಪ್ರದೇಶದ ಕೆಲ ತಾಣಗಳ ಹೆಸರುಗಳನ್ನು ಬದಲಿಸಿರುವುದಾಗಿ ಚೀನಾ ಹೇಳಿತ್ತು.

## ರಾಣೇಬೆನ್ನೂರಿನಲ್ಲಿ ನಾಳೆ ಕಾಂಗ್ರೆಸ್ ಸಭೆ

ರಾಣೇಬೆನ್ನೂರು, ಏ. 4 - ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಸಲಹೆ, ಸೂಚನೆ ಕೊಡಲು ನಾಡಿದ್ದು ದಿನಾಂಕ 6 ರಂದು ಬೆಳಿಗ್ಗೆ ವಿನಾಯಕ ನಗರದ ಪಕ್ಷದ ಕಛೇರಿಯಲ್ಲಿ ನಡೆಯಲಿದೆ. ಅಧ್ಯಕ್ಷರುಗಳಾದ ಮಂಜನಗೌಡ ಪಾಟೀಲ ಹಾಗೂ ಶೇರು ಕಾಬೂಲಿ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಮಕ್ಕಳ ಮಧುಮೇಹ ವಿಶೇಷ ಶಿಬಿರ

ದಾವಣಗೆರೆ, ಏ.4- ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ ಹಾಗೂ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದ ಆಶ್ರಯದಲ್ಲಿ ಮಕ್ಕಳ ಮಧುಮೇಹ ವಿಶೇಷ ಶಿಬಿರವನ್ನು ನಾಡಿದ್ದು ದಿನಾಂಕ 6 ರ ಗುರುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ.

ಮಕ್ಕಳಲ್ಲಿ ಮಧುಮೇಹ ಇನ್ಸುಲಿನ್ ಹಾರ್ಮೋನಿನ ಕೊರತೆಯಿಂದ ಉಂಟಾಗುತ್ತದೆ. ಇಂದು ಭಾರತದಲ್ಲಿ ಸುಮಾರು 2.5 ಲಕ್ಷ ಮಕ್ಕಳು ಮಧುಮೇಹದಿಂದ ಬಳಲುತ್ತಿದ್ದು ಹಾಗೂ ಪ್ರತಿ ವರ್ಷ ಮಕ್ಕಳಲ್ಲಿ ಶೇ. 3 ರಿಂದ ಶೇ. 5 ಮಧುಮೇಹ ಹೆಚ್ಚಾಗುತ್ತಿದೆ.

ಮಧುಮೇಹ ನಿರ್ವಹಣೆಯಲ್ಲಿ ಇನ್ಸುಲಿನ್ ಇಂಜೆಕ್ಷನ್, ಸಮತೋಲನ ಆಹಾರ, ನಿಯಮಿತ ವ್ಯಾಯಾಮ ಹಾಗೂ ರಕ್ತದ ಶುಗರ್ ಪರೀಕ್ಷೆ ಬಹುಮುಖ್ಯ ಪಾತ್ರ ವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಇವುಗಳ ಅರಿವನ್ನು ಮೂಡಿಸುವ ಕಾರ್ಯಕ್ರಮವನ್ನು ಬಾಪೂಜಿ ಮಕ್ಕಳ ಆಸ್ಪತ್ರೆ, ಮಕ್ಕಳ ಎಂಡೋಕ್ರೀನಾಲಜಿ ವಿಭಾಗದಿಂದ ಆಯೋಜಿಸಲಾಗಿದೆ.

ಆ ದಿನ ಟೈಪ್ 1 ಡಯಾಬಿಟಿಸ್ ನಿರ್ವಹಣ ಬಗ್ಗೆ ಮಾಹಿತಿ, ಉಚಿತ ಶುಗರ್/HbA1c ಪರೀಕ್ಷೆ, ಉಚಿತ ಇನ್ಸುಲಿನ್ ವಿತರಣೆ, ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ ನಡೆಸಲಾಗುವುದು. ಟೈಪ್ 1 ಡೈಯಾಬಿಟಿಸ್ ಹೊಂದಿರುವ ಮಕ್ಕಳು ಮತ್ತು ಪೋಷಕರು ಈ ಕಾರ್ಯಕ್ರಮಕ್ಕೆ ಆಗಮಿಸಿ, ಕಾರ್ಯಕ್ರಮದ ಉಪಯೋಗವನ್ನು ಪಡೆದುಕೊಳ್ಳಲು ಆಶಿಸುತ್ತೇವೆ.

ವಿವರಗಳಿಗೆ ಡಾ. ಜಯಶ್ರೀ, ಪಿಡಿಯಾಟ್ರಿಕ್ ಎಂಡೋಕ್ರೀನಾಲಜಿ ವಿಭಾಗ, ಬಾಪೂಜಿ ಮಕ್ಕಳ ಆಸ್ಪತ್ರೆ, ಮೊ: 73489 19449 ಇವರನ್ನು ಸಂಪರ್ಕಿಸುವುದು.

## ನಗರದ 19 - 21ನೇ ವಾರ್ಡ್‌ಗಳಲ್ಲಿ ಇಂದು ಎಸ್ಸೆಸ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರಿಂದ 19 ಮತ್ತು 21 ವಾರ್ಡ್ ನ ವಿವಿಧ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10-30 ರಿಂದ 19 ನೇ ವಾರ್ಡ್‌ನ ಶ್ರೀ ಚೌಡೇಶ್ವರಿ ದೇವಸ್ಥಾನದ ಬಳಿಯಿಂದ ಪ್ರಚಾರ ಆರಂಭಗೊಳ್ಳಲಿದೆ.

ಕಾಂಗ್ರೆಸ್ ಅಧ್ಯಕ್ಷ ಅಯೂಬ್, ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಶಿವಲೀಲಾ ಕೊಟ್ರಯ್ಯ, ಸಾವನ್ ಜೈನ್, ಗಾಡಿ ಧರ್ಮಣ್ಣ ಅವರುಗಳು ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ಉಚಿತ ಸಿಇಟಿ, ನೀಟ್ ತರಬೇತಿ

ದಾವಣಗೆರೆ, ಏ.4- ನಗರದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಉಚಿತ ಸಿಇಟಿ / ನೀಟ್ ಬೋಧನಾ ತರಗತಿಗಳನ್ನು ಆಯೋಜಿಸಿದೆ ಎಂದು ಸಂಘಟನಾ ಕಾರ್ಯದರ್ಶಿ ಮಂಜುನಾಥ ಕೊಳ್ಳೇರ ತಿಳಿಸಿದ್ದಾರೆ.

ಇದೇ ದಿನಾಂಕ 10 ರಿಂದ ತರಗತಿಗಳು ಆರಂಭವಾಗಲಿವೆ. ಆಸಕ್ತರು ನಾಳೆ ದಿನಾಂಕ 5 ರೊಳಗಾಗಿ ಹೆಸರು ನೋಂದಾಯಿಸಬೇಕು. ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ 9880544153 8553644928.

# ಶಿಳ್ಳೇಕ್ಯಾತರಿಗೆ ನಿವೇಶನ ಕಲ್ಪಿಸಲು ಡಿಎಸ್ಎಸ್ ಆಗ್ರಹ



ದಾವಣಗೆರೆ, ಏ.4- ಹೊನ್ನಾಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ದೇವನಾಯಕಹಳ್ಳಿ ಬಳಿ ತೋಟಗಾರಿಕೆ ಇಲಾಖೆ ಹಿಂಭಾಗದಲ್ಲಿ 30 ವರ್ಷಗಳಿಂದ ಗುಡಿಸಲು ಹಾಗೂ ತಾತ್ಕಾಲಿಕ ಶೇಡ್ ನಿರ್ಮಿಸಿಕೊಂಡು ವಾಸ ಮಾಡುತ್ತಿರುವ ಪರಿಶಿಷ್ಟ ಜನಾಂಗಕ್ಕೆ ಸೇರಿದ ಶಿಳ್ಳೇಕ್ಯಾತ ಸಮಾಜದ ವಸತಿ ಹೀನರಿಗೆ ನಿವೇಶನ ಮಂಜೂರು ಮಾಡುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ವತಿಯಿಂದ ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್ ಮಾತನಾಡಿ, ದೇವನಾಯಕನಹಳ್ಳಿಯಲ್ಲಿ ಸುಮಾರು 30 ವರ್ಷಗಳಿಂದ ಪರಿಶಿಷ್ಟ ಜಾತಿಗೆ ಸೇರಿದ ಶಿಳ್ಳೇಕ್ಯಾತ ಸಮುದಾಯದ 80 ಕುಟುಂಬಗಳು ಗುಡಿಸಲು ಹಾಗೂ ತಾತ್ಕಾಲಿಕ ಶೆಡ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಶೆಡ್‌ಗಳಲ್ಲಿ ಮಹಿಳೆಯರು, ಮಕ್ಕಳು, ವಯೋವೃದ್ಧರು ವಾಸವಾಗಿದ್ದು, ಈ ಕುಟುಂಬದವರಿಗೆ ಯಾವುದೇ ಚರಾಸ್ತಿ-ಸ್ಥಿರಾಸ್ತಿ ಇಲ್ಲದೆ, ಕೂಲಿ ಮಾಡಿಕೊಂಡು ಜೀವನ ನಡೆಸುತ್ತಾ ಸುಮಾರು ವರ್ಷಗಳಿಂದ ಹೊನ್ನಾಳಿ ಪಟ್ಟಣದಲ್ಲಿ ವಾಸವಾಗಿದ್ದು, ವಿದ್ಯುತ್ ಸಂಪರ್ಕ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ಶೌಚಾಲಯ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯ ಇಲ್ಲದೆ ಬದುಕುತ್ತಿದ್ದಾರೆ. ಜೊತೆಗೆ ಮಕ್ಕಳು ಶಾಲೆಗೆ ಸುಮಾರು ಒಂದು ಕಿ.ಮೀ. ದೂರದವರೆಗೆ ನಡೆದುಕೊಂಡು ಹೋಗಿ ಬರಬೇಕಾದ ದುಸ್ಥಿತಿ ಇದೆ ಎಂದರು.

ಈ ವೇಳೆ ಡಿಎಸ್ಎಸ್ ಹೊನ್ನಾಳಿ ತಾಲ್ಲೂಕು ಸಂಚಾಲಕ ಬೆನಕನಹಳ್ಳಿ ಪರಮೇಶಪ್ಪ, ಲಿಂಗರಾಜು ಎಂ.ಗಾಂಧಿನಗರ, ಮಂಜುನಾಥ್ ಎಲೆಕ್ಟ್ರಿಕಲ್, ಚಿತ್ತಾನಹಳ್ಳಿ ನಾಗರಾಜ, ದೇವನಾಯಕನಹಳ್ಳಿಯ ಖುಷಿ, ಪ್ರೇಮ, ಶೃತಿ ಮತ್ತಿತರರಿದ್ದರು.

## ಓದುಗರ ಪತ್ರ



### ಇನ್ನೂ ಬೆಳಗದ ವಿದ್ಯುತ್ ದೀಪಗಳು

ದಾವಣಗೆರೆ ಹೊಸ ಆರ್‌ಟಿಓ ಕಚೇರಿಯಿಂದ ಅಕ್ತರ್ ರಜಾ ಸರ್ಕಲ್‌ಗೆ ಸಾಗುವ ರಿಂಗ್ ರಸ್ತೆಯಲ್ಲಿ ಕೆಲವು ತಿಂಗಳುಗಳ ಹಿಂದೆಯೇ ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿದೆ. ಆದರೆ ಇದುವರೆಗೂ ವಿದ್ಯುತ್ ದೀಪಗಳನ್ನು ಮಾತ್ರ ಅಳವಡಿಸಿಲ್ಲ.

ಸಂಜೆ ಕತ್ತಲಿನಲ್ಲಿ ಸಾರ್ವಜನಿಕರು, ವಾಹನ ಸವಾರರು ಸಂಚರಿಸುವುದಕ್ಕೆ ತುಂಬಾ ತೊಂದರೆ ಉಂಟಾಗಿದೆ. ರಿಂಗ್ ರಸ್ತೆ ಆಗಿರುವ ಕಾರಣ ಇಲ್ಲಿ ಸಣ್ಣಪುಟ್ಟ ವಾಹನಗಳಿಂದ ಹಿಡಿದು ಭಾರೀ ವಾಹನಗಳು ಕೂಡ ಸಂಚರಿಸುತ್ತವೆ. ವಿದ್ಯುತ್ ದೀಪಗಳನ್ನು ಅಳವಡಿಸಿದರೆ ಮಾತ್ರ ವಾಹನ ಸಂಚಾರ ಮತ್ತು ಸಾರ್ವಜನಿಕರ ಓಡಾಟಕ್ಕೆ ಅನುಕೂಲವಾಗುತ್ತದೆ.

ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಇತ್ತ ಗಮನಹರಿಸಬೇಕಾಗಿದೆ.

-ವಾದಿರಾಜ್ ಭಟ್ ವೈ., ವಕೀಲರು, ದಾವಣಗೆರೆ

## ಮುಷ್ಟೂರಿನಲ್ಲಿ ನಾಳೆ ಉಚಿತ ನೇತ್ರ ತಪಾಸಣಾ ಶಿಬಿರ

ರಾಣೇಬೆನ್ನೂರು, ಏ. 4- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಅಂಧತ್ವ ನಿವಾರಣಾ ಸಂಸ್ಥೆ, ಜಿಲ್ಲಾ ನೇತ್ರ ಸಂಚಾರಿ ಘಟಕ, ಆರೋಗ್ಯ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ, ಶ್ರೀ ಕಂಚಿ ಕಾಮಕೋಟಿ ಮೆಡಿಕಲ್ಸ್ ಟ್ರಸ್ಟ್, ಶಂಕರ ಕಣ್ಣಿನ ಆಸ್ಪತ್ರೆ (ಶಿವಮೊಗ್ಗ), ಶಂಕರ ಮಿಷನ್ ಸೆಂಟರ್, ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆ ಸಂಯುಕ್ತ ಆಶ್ರಯದಲ್ಲಿ ನಾಡಿದ್ದು ದಿನಾಂಕ 6ರ ಗುರುವಾರ ಬೆಳಿಗ್ಗೆ 8ರಿಂದ ಮಧ್ಯಾಹ್ನ 1 ರವರೆಗೆ ಹೊಸ ಮುಷ್ಟೂರು ಗ್ರಾಮದ ಶಾಲಾ ಆವರಣದಲ್ಲಿ ಬಡವರಿಗಾಗಿ ಉಚಿತ ನೇತ್ರ ತಪಾಸಣೆ ಮತ್ತು ಕಣ್ಣಿನ ಪೊರೆ ಶಸ್ತ್ರಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರ

ಕ್ರಿಕೆಟ್ ಅಕಾಡೆಮಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಸತತ 22ನೇ ವರ್ಷದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಗೂ ಹೈಸ್ಕೂಲ್ ಮೈದಾನದಲ್ಲಿ ಇಂದಿನಿಂದ ಪ್ರಾರಂಭವಾಗಲಿದೆ. ಶಿಬಿರದಲ್ಲಿ ಫಿಟ್ನೆಸ್ ಬಗ್ಗೆಯೂ ಹೇಳಿಕೊಡಲಾಗುವುದು. ಶಿಬಿರದ ಮಧ್ಯದಲ್ಲಿ ಬೇರೆ ಜಿಲ್ಲೆಗಳ ಕ್ರಿಕೆಟ್ ತಂಡದ ವಿರುದ್ಧ ಪಂದ್ಯಗಳನ್ನು ಕೂಡ ಆಯೋಜಿಸಲಾಗಿದೆ. ವಿವರಗಳಿಗೆ ತರಬೇತಿ ಶಿಬಿರದ ಆಯೋಜಕರಾದ ಗುರುದೇವ್ ಅಂಬರ್ಕರ್ (9964599160), ಗೋಪಾಲಕೃಷ್ಣ (7899610318), ತಿಮ್ಮೇಶ್ (9880440602) ಅವರನ್ನು ಸಂಪರ್ಕಿಸಬಹುದು.

# ಮಹಿಳೆಯರ ಸಾಧನೆಗೆ ಪುರುಷರ ಪೂರ್ಣ ಪ್ರಮಾಣದ ಸಹಕಾರ ಅಗತ್ಯ

**'ದಾವಣಗೆರೆ ಗೃಹಿಣಿ ಸ್ಪರ್ಧೆ' ಕಾರ್ಯಕ್ರಮದಲ್ಲಿ ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ**



ದಾವಣಗೆರೆ, ಏ.4- ಮಹಿಳೆಯರು ಕೇವಲ ಅಡುಗೆ ಮನೆಗೆ ಸೀಮಿತವಾಗದೇ ಸ್ವಾರ್ಥಬಿಟ್ಟು ತಮ್ಮ ಕುಟುಂಬದ ಎಲ್ಲಾ ಪ್ರಕಾರಗಳ ಮಾನವೀಯ ಮೌಲ್ಯದ ಸಂಬಂಧಗಳ ಸಂಸ್ಕಾರ, ಸಂಸ್ಕೃತಿಗಳ ಪರಂಪರೆಗಳನ್ನು ಮುಂದಿನ ಪೀಳಿಗೆಗೆ ಬಿತ್ತುವ ಆದ್ಯ ಕರ್ತವ್ಯ ಗೃಹಿಣಿಯರದ್ದು ಎಂದು ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ಹೇಳಿದರು.

ನಗರದ ಕಲಾಕುಂಚ ಮಹಿಳಾ ವಿಭಾಗದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಚೇತನಾ ವಸತಿ ಗೃಹದ ಸಭಾಂಗಣದಲ್ಲಿ ನಿನ್ನೆ ಹಮ್ಮಿಕೊಂಡಿದ್ದ 'ದಾವಣಗೆರೆ ಗೃಹಿಣಿ ಸ್ಪರ್ಧೆ'ಯಲ್ಲಿ ವಿಜೇತರಾದವರು ಕಲಾಕುಂಚಕ್ಕೆ ಕೃತಜ್ಞತಾ ಸಮರ್ಪಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಿರಂತರ ಗೃಹ ನಿರ್ವಹಣೆಯ ಕಠಿಣ ಪರಿಶ್ರಮದ ಮಹಿಳೆಯರ ಸಾಧನೆಗೆ ಪುರುಷರ ಪೂರ್ಣ ಪ್ರಮಾಣದ ಸಹಕಾರ ಅಗತ್ಯವಾಗಿದೆ ಎಂದರು.

ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಗೃಹಿಣಿ ಸ್ಪರ್ಧೆಯ ಲೆಕ್ಕಪತ್ರ ಮಂಡಿಸಿ ಅನುಮೋದನೆ ಪಡೆದರು.

ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್ ಶೆಣೈ, ಕಲಾಕುಂಚ ಡಿಸಿಎಂ ಶಾಖೆ ಅಧ್ಯಕ್ಷರಾದ ಶ್ರೀಮತಿ ಶಾರದಮ್ಮ ಶಿವನಪ್ಪ, ಕೆ.ಬಿ. ಬಡಾವಣೆ ಶಾಖೆ ಅಧ್ಯಕ್ಷರಾದ ವಿ.ಕೃಷ್ಣಮೂರ್ತಿ, ಕಲಾಕುಂಚ ಸಿದ್ದವೀರಪ್ಪ ಬಡಾವಣೆ ಶಾಖೆ ಅಧ್ಯಕ್ಷರಾದ ಶ್ರೀಮತಿ ಲಲಿತಾ ಕಲ್ಲೇಶ್ ಮುಂತಾದವರು ಮಾತನಾಡಿದರು. ಕು. ಜಿ.ಎಂ.ಚಂದನಾ ಪ್ರಾರ್ಥಿಸಿದರು. ಶ್ರೀಮತಿ ಲಲಿತಾ ಕಲ್ಲೇಶ್ ಸ್ವಾಗತಿಸಿದರು. ಶ್ರೀಮತಿ ಪುಷ್ಪಾ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಲೀಲಾ ಸುಭಾಷ್ ವಂದಿಸಿದರು.




**ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆ**

ಕರ್ನಾಟಕ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಕ್ರಮಗಳನ್ನು ತಡೆಯುವ ಸಂಬಂಧ ದಾವಣಗೆರೆಯ ವಿವಿಧೆಡೆಯಲ್ಲಿ ಚೆಕ್ ಪೋಸ್ಟ್‌ಗಳನ್ನು ಆರಂಭಿಸಲಾಗಿದ್ದು, ನಗರಕ್ಕೆ ಪ್ರವೇಶಿಸುವ ಹಾಗೂ ನಗರದಿಂದ ಹೊರ ಹೋಗುವ ವಾಹನಗಳ ಮೇಲೆ ಕಣ್ಣಿಡಲಾಗಿದೆ. ಶಾಮನೂರು ಬಳಿಯ ಚೆಕ್ ಪೋಸ್ಟ್ ದೃಶ್ಯವಿದು.

## ಹಳೇಪೇಟೆಯಲ್ಲಿ ನಾಳೆ ರಥೋತ್ಸವ, ಇಂದು ಗುಗ್ಗಳ



ದಾವಣಗೆರೆ ಹಳೇಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ನಾಳೆ ಗುರುವಾರ ಸಂಜೆ 7 ಗಂಟೆಗೆ ನಡೆಯಲಿದೆ.

ರಥೋತ್ಸವದ ನಿಮಿತ್ತ ಇಂದು ಬೆಳಿಗ್ಗೆ 6 ಗಂಟೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮತ್ತು ಅಗ್ನಿಕುಂಡ ಹಾಗೂ ಉತ್ಸವ ಜರುಗಲಿದೆ. ನಾಡಿದ್ದು ದಿನಾಂಕ 7 ರ ಶುಕ್ರವಾರ ರಾತ್ರಿ 8 ಗಂಟೆಗೆ ಓಕುಳಿ ಉತ್ಸವ ಜರುಗುವುದು.

## ತೋರಣಗಟ್ಟೆಯಲ್ಲಿ ನಾಳೆ ತೇರು

ಜಗಳೂರು, ಏ.4- ತಾಲ್ಲೂಕಿನ ತೋರಣಗಟ್ಟೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ನಾಡಿದ್ದು ದಿನಾಂಕ 6 ರ ಗುರುವಾರ ಸಂಜೆ 5.30ಕ್ಕೆ ಡೊಳ್ಳು ಮೇಳಗಳೊಂದಿಗೆ ವಿಜೃಂಭಣೆಯಿಂದ ಜರುಗಲಿದೆ.

ಮರುದಿನ ಬೆಳಿಗ್ಗೆ ಸ್ವಾಮಿಯ ಉಯ್ಯಾಲೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ ನಡೆಯಲಿದೆ

# ಧಾರ್ಮಿಕ ಸ್ಥಳಗಳಲ್ಲಿ ಚುನಾವಣಾ ಪ್ರಚಾರ ನಿಷೇಧ : ಜಿಲ್ಲಾಧಿಕಾರಿ



ದಾವಣಗೆರೆ, ಏ. 3- ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನ, ಮಠ, ಮಂದಿರ, ಜೈನ ಬಸದಿ, ಮಸೀದಿ, ದರ್ಗಾ ಹಾಗೂ ಇದರ ವ್ಯಾಪ್ತಿಯಲ್ಲಿ ಬರುವ ಸಮುದಾಯ ಭವನ, ಯಾತ್ರಿ ನಿವಾಸ ಪ್ರದೇಶ, ಕಲ್ಯಾಣ ಮಂಟಪ ಭಾಗದ ದೇವಸ್ಥಾನದ ಆವರಣದ ಖಾಲಿ ಜಾಗದ ಪ್ರದೇಶದಲ್ಲಿ ಯಾವುದೇ ರಾಜ ಕೀಯ ಚಟುವಟಿಕೆ ಗಳನ್ನು ನಡೆಸದಂತೆ ಜಿಲ್ಲಾಧಿಕಾರಿ ಹಾ ಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ದೇವಸ್ಥಾನ, ಚರ್ಚ್, ಮಸೀದಿ ಇವುಗಳ ಧ್ವನಿವರ್ಧಕಗಳನ್ನು ರಾಜಕೀಯ ಚಟುವಟಿಕೆಗಳಿಗೆ ಬಳಸುವಂತಿಲ್ಲ. ಚುನಾವಣಾ ಸಂದರ್ಭದಲ್ಲಿ ರಾಜಕೀಯ ವ್ಯಕ್ತಿಗಳು ತಮ್ಮ ವ್ಯಾಪ್ತಿಯ ದೇವಸ್ಥಾನಗಳಲ್ಲಿ ಹಾಗೂ ಇತರೆ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿ, ಆವರಣದಲ್ಲಿ ಸಭೆ, ಸಮಾರಂಭ ಇನ್ನಿತರೆ ರಾಜಕೀಯ ಚಟುವಟಿಕೆಗಳನ್ನು ನಡೆಸಲು ಅವಕಾಶ ಇರುವುದಿಲ್ಲ.

ಈ ಮೇಲಿನ ಯಾವುದೇ ಅಂಶಗಳ ಉಲ್ಲಂಘನೆಯಾದಲ್ಲಿ ಧಾರ್ಮಿಕ ಸಂಸ್ಥೆಗಳ (ತಡೆಗಟ್ಟುವಿಕೆ ಅಥವಾ ದುರುಪಯೋಗ) ಕಾಯ್ದೆ 1988ರ ಪ್ರಕಾರ ನಿಯಮಾನುಸಾರ ಸಂಸ್ಥೆಗಳ ಮುಖ್ಯಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ.

# ಕೃತಕ ಬದುಕು ರೋಗಕ್ಕೆ ಆಹ್ವಾನ : ಚನ್ನಬಸವ ಶ್ರೀ



ರಾಣೇಬೆನ್ನೂರು, ಏ. 4- ಕುಕ್ಕರ್‌ನಲ್ಲಿ ಮಾಡಿದ ಅನ್ನ ಊಟ ಮಾಡುವುದು ಅಕ್ಕಿಯಲ್ಲಿನ ಪೋಷಕಾಂಶಗಳನ್ನು ಉಸಿರುಗಟ್ಟಿಸಿ ಸಾಯಿಸಿದ ಅನ್ನ ಉಂಡಂತೆ. ಇದರಿಂದ ರೋಗಬಾಧೆಗಳು ಹೆಚ್ಚು ಎಂದು ಗಂಗಾ ಯೋಗಾಯುರ್ವೇದ ಸಂಸ್ಥಾನದ ಶ್ರೀ ಚನ್ನಬಸವ ಸ್ವಾಮಿಗಳು ಹೇಳಿದರು.

ಇಲ್ಲಿನ ನಗರಸಭೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ವಿಶ್ವ ಧರ್ಮ ಪ್ರವಚನದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ನೈಸರ್ಗಿಕ ಬದುಕನ್ನು ದೂರ ಮಾಡಿಕೊಂಡು ಕೃತಕ ಬದುಕನ್ನು ನಡೆಸಿ, ವಿವಿಧ ರೋಗಗಳನ್ನು ಆಹ್ವಾನಿಸಿಕೊಳ್ಳುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಬಿಸಿಲಿನಲ್ಲಿ ದುಡಿಯುವ ರೈತ ಅಂದು ಆರೋಗ್ಯಕರವಾಗಿರುತ್ತಿದ್ದ. ಆದರೆ, ಇಂದು ರೈತರು ಹೊಲಗದ್ದೆಗಳಿಗಿಂತ ರಾಜಕೀಯದಲ್ಲಿ ಹೆಚ್ಚು ತೊಡಗಿಕೊಳ್ಳುತ್ತಿದ್ದಾರೆ. ಅನೇಕ ವ್ಯಸನಗಳಿಗೆ ಸಿಲುಕಿ ಅನಾರೋಗ್ಯ ಪೀಡಿತರಾಗುತ್ತಿದ್ದಾರೆ. ಮನುಷ್ಯನ ಅಂ ಗಾಂಗಗಳು ತಮ್ಮ ಪಾಲಿನ ಕಾರ್ಯಗಳನ್ನು ಸಮರ್ಪಕ ವಾಗಿ ನಿರ್ವಹಿಸುತ್ತಿಲ್ಲ ಎಂದು ಸ್ವಾಮೀಜಿ ಹೇಳಿದರು.

ಹಾಳಾಗಿರುವ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಆರೋಗ್ಯವನ್ನು ಮರಳಿ ಪಡೆಯಲು ಕೃತಕ ಬದುಕಿ ನಿಂದ ಹೊರ ಬರಬೇಕು. ಸಾವಯವ ಬೆಳೆಗಳನ್ನು ಬೆಳೆಯಬೇಕು. ಕುಕ್ಕರ್, ಫ್ರಿಜ್ ಮುಂತಾದ ಯಾಂತ್ರಿಕ ಬದುಕನ್ನು ದೂರವಾಗಿರಿಸಿಕೊಂಡು, ರೋಗ ನಿರೋಧಕ ಸಸ್ಯ ಸಂಪತ್ತಿನಿಂದ ಆರೋಗ್ಯವಂತರಾಗಿರಿ ಎಂದು ಚನ್ನಬಸವ ಶ್ರೀಗಳು ಹೇಳಿದರು.

**ಉಚಿತ ಶಿಕ್ಷಣ :** ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿನ ತಮ್ಮ ಸಂಸ್ಥೆ ಶಾಲೆಗಳಲ್ಲಿ ಬಡ ಮಕ್ಕಳಿಗೆ ಪ್ರೌಢ ಶಿಕ್ಷಣದಿಂದ ಪದವಿವರೆಗೆ ಉಚಿತ ಶಿಕ್ಷಣ ಕೊಡುವುದಾಗಿ, ಅವಶ್ಯವಿದ್ದವರು 73376 18850 ಈ ದೂರವಾಣಿಗೆ ಸಂಪರ್ಕಿಸಲು ಸ್ವಾಮೀಜಿ ತಿಳಿಸಿದರು.

# ಜನವರಿ-ಫೆಬ್ರವರಿಯಲ್ಲಿ ಕುಸಿದ ಖಾತ್ರಿ ದಿನಗಳು

**ಆಪ್ ಆಧರಿತ ಹಾಜರಾತಿ ಸಮಸ್ಯೆ ಪರಿಣಾಮ**

ನವದೆಹಲಿ, ಏ.4 - ಉದ್ಯೋಗ ಖಾತ್ರಿ ಯೋಜನೆಯಡಿ ಸೃಷ್ಟಿಯಾಗುವ ಮಾನವ ದಿನಗಳು ಕಳೆದ ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ಕಡಿಮೆಯಾಗಿವೆ. ಆಪ್ ಆಧರಿತ ಹಾಜ ರಾತಿ ವ್ಯವಸ್ಥೆಯಲ್ಲಿ ಸಮಸ್ಯೆಯಾಗಿದ್ದೇ ಇದಕ್ಕೆ ಕಾರಣ ಎಂದು ಸರ್ಕಾರೇತರ ಸಂಘಟನೆಯೊಂದು ತಿಳಿಸಿದೆ.

ಈ ವರ್ಷ ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ 34.59 ಕೋಟಿ ಮಾನವ ದಿನಗಳು ಸೃಷ್ಟಿಯಾಗಿವೆ. ಕಳೆದ ವರ್ಷ ಇದೇ ಅವಧಿಯಲ್ಲಿ 53.07 ಕೋಟಿ ಮಾನವ ದಿನಗಳು ಸೃಷ್ಟಿಯಾಗಿದ್ದವು ಎಂದು ಎನ್. ಆರ್.ಇ.ಜಿ.ಎ. ಸಂಘರ್ಷ ಮೋರ್ಚಾ ತಿಳಿಸಿದೆ.

ಈ ಸಂಘಟನೆಯ ನೇತೃತ್ವದಲ್ಲಿ ಉದ್ಯೋಗ ಖಾತ್ರಿ ಕಾರ್ಮಿಕರು ನೂತನ ಆಪ್ ಆಧರಿತ ವ್ಯವಸ್ಥೆಯ ವಿರುದ್ಧ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. 2021ರಲ್ಲಿ 56.94 ಕೋಟಿ ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು. 2020ರಲ್ಲಿ 47.75 ಕೋಟಿ ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು ಎಂದು ಸಂಘಟನೆ ತಿಳಿಸಿದೆ.

ಉದ್ಯೋಗ ಖಾತ್ರಿಗೆ ರಾಷ್ಟ್ರೀಯ ಮೊಬೈಲ್ ನಿಗಾ ವ್ಯವಸ್ಥೆ (ಎನ್.ಎಂ.ಎಂ.ಎಸ್.) ರೂಪಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ನೆಟ್‌ವರ್ಕ್ ಸಮಸ್ಯೆಯಿಂದಾಗಿ ಹಾಜರಾತಿ ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಲಾಗುತ್ತಿದೆ. ಆಧಾರ್ ಆಧರಿತ ಪಾವತಿ ವ್ಯವಸ್ಥೆ (ಎ.ಬಿ.ಪಿ.ಎಸ್.) ಬಗ್ಗೆಯೂ ಹಲವು ಕಾರ್ಮಿಕರು ಆಕ್ಷೇಪಿಸಿದ್ದಾರೆ. ಹಲವಾರು ಕಾರ್ಮಿಕರು ಎ.ಬಿ.ಪಿ.ಎಸ್. ಖಾತೆ ಹೊಂದಿಲ್ಲ ಎಂದು ತಿಳಿಸಲಾಗಿದೆ. ದೇಶದಲ್ಲಿ 10 ಕೋಟಿ ಉದ್ಯೋಗ ಖಾತ್ರಿ ಕಾರ್ಮಿಕರಿದ್ದಾರೆ. ಇವರಲ್ಲಿ ಶೇ.40ರಷ್ಟು ಜನ ಮಾತ್ರ ಎ.ಬಿ.ಪಿ.ಎಸ್. ಖಾತೆ ಹೊಂದಿದ್ದಾರೆ ಎಂದು ಮೋರ್ಚಾ ತಿಳಿಸಿದೆ.

## ಮತ ಯಂತ್ರ ದಾಸ್ತಾನು ಕೊಠಡಿಯನ್ನು ಪರಿಶೀಲಿಸಿದ ಡಿಸಿ ಶಿವಾನಂದ ಕಾಪಶಿ



ದಾವಣಗೆರೆ, ಏ.4- ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತ ಯಂತ್ರಗಳ ದಾಸ್ತಾನು ಕೊಠಡಿಗೆ ಮಂಗಳವಾರ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ವಿಧಾನ ಸಭಾ ಕ್ಷೇತ್ರವಾರು ಹಂಚಿಕೆಯಾದ ರ್‍ಯಾಂಡಮ್ಮೈಸೇಷನ್ (ಸಮ್ಮಿಶ್ರೀಕರಣ) ವಿದ್ಯುನ್ಮಾನ ಮತಯಂತ್ರಗಳನ್ನು ಪರಿಶೀಲನೆ ನಡೆಸಿದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹಾಗೂ ವಿವಿಧ ಚುನಾವಣಾಧಿಕಾರಿಗಳು ಉಪಸ್ಥಿತರಿದ್ದರು.

## ಹೊನ್ನಾಳಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಟಿ.ಜಿ. ರಮೇಶ್‌ಗೌಡ

ಹೊನ್ನಾಳಿ, ಏ4- ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾಗಿ ತರಗನಹಳ್ಳಿ ಟಿ.ಜಿ. ರಮೇಶ್‌ಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿಕಟಪೂರ್ವ ಅಧ್ಯಕ್ಷ ಎಂ. ಬಸವರಾಜಪ್ಪ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆಯಿತು.

ರಮೇಶ್‌ಗೌಡ ಒಬ್ಬರೇ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಚುನಾವಣಾಧಿಕಾರಿಯಾಗಿ ಆಗಮಿಸಿದ್ದ ಸಹಕಾರ ಅಭಿವೃದ್ಧಿ ಅಧಿಕಾರಿ ರಮೇಶ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಗುತ್ಯಪ್ಪ, ನಿರ್ದೇಶಕರಾದ ಎ. ನಾಗೇಂದ್ರಪ್ಪ, ಎ.ಎಚ್. ಚಂದ್ರಪ್ಪ, ಎಂ.ಆರ್. ಹನುಮಂತಪ್ಪ, ಎಚ್.ಪಿ. ವಿಜಯಕುಮಾರ್, ಕೆ. ತಿಮ್ಮೇಶಪ್ಪ, ಮಮತ ರಮೇಶ್, ಸರೋಜಮ್ಮ ಸಿದ್ದಪ್ಪ, ಕೆ.ವಿ.ನಾಗರಾಜ್, ಎಂ.ಜಿ. ಬಸವರಾಜಪ್ಪ, ಕೆ. ಉಮಾಪತಿ, ಜಿ.ಪಂ, ಕಸಬಾ ಸೊಸೈಟಿ ಅಧ್ಯಕ್ಷ ಜಿನದತ್ತ, ಬೆನಕನಹಳ್ಳಿ ಮಹೇಂದ್ರಗೌಡ, ಡಿ.ಜಿ. ಸುರೇಂದ್ರಗೌಡ, ಪಿಎಲ್‌ಡಿ ಬ್ಯಾಂಕ್‌ನ ಕಾರ್ಯದರ್ಶಿ ವಿಶಾಲಾಕ್ಷಿ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

# ನಗರದಲ್ಲಿ ನಾಳೆ ಅಕ್ಕಮಹಾದೇವಿ ಜಯಂತಿ ಯಮ್ಮಿ ಶಾರದಮ್ಮ ಅವರಿಗೆ 'ಅಕ್ಕ' ಪ್ರಶಸ್ತಿ






ದಾವಣಗೆರೆ, ಏ.4- ಶ್ರೀ ಅಕ್ಕಮಹಾದೇವಿ ಸಮಾಜದಿಂದ ಶ್ರೀ ಅಕ್ಕಮಹಾದೇವಿ ಜಯಂತ್ಯುತ್ಸವ ಮತ್ತು ವಚನೋತ್ಸವ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 6ರ ಗುರುವಾರ ಸಂಜೆ 5.30ಕ್ಕೆ ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕಂಚಿಕೇರಿ ಸುಶೀಲಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸೋಮೇಶ್ವರ ವಿದ್ಯಾಲಯದ ಪ್ರಾಂಶುಪಾಲರಾದ ಹೆಚ್.ಪಿ. ವೀಣಾ, ಬಾಪೂಜಿ ವಿದ್ಯಾಸಂಸ್ಥೆ ನಿರ್ದೇಶಕರಾದ ಪ್ರಭಾ ಮಲ್ಲಿಕಾರ್ಜುನ್, ಜನಪದ ಕಲಾವಿದರಾದ ಚಂದ್ರಕಲಾ ಹಾರಕೋಡ್ ಮುಖ್ಯ ಅತಿಥಿಗಳಾಗಿದ್ದಾರೆ.

ವಿಶ್ರಾಂತ ನೇತ್ರ ತಜ್ಞರಾದ ಡಾ. ಎ.ಬಿ. ಕಾಕಡೆ ಅವರಿಗೆ ಸನ್ಮಾನಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಶ್ರೀ ಅಕ್ಕಮಹಾದೇವಿ ಜಯಂತ್ಯೋತ್ಸವದ ಅಂಗವಾಗಿ ಮಹಿಳಾ ಸಾಧಕರಿಗೆ ಕೊಡ ಮಾಡುವ 'ಅಕ್ಕ' ಪ್ರಶಸ್ತಿಯನ್ನು ಶ್ರೀಮತಿ ಯಮ್ಮಿ ಶಾರದಮ್ಮ ಅವರಿಗೆ ಪ್ರದಾನ ಮಾಡಲಾಗುವುದು ಎಂದು ಶ್ರೀ ಅಕ್ಕಮಹಾದೇವಿ ಸಮಾಜದ ಕಾರ್ಯದರ್ಶಿ ದೊಗ್ಗಳ್ಳಿ ಸುವರ್ಣ, ಉಪಾಧ್ಯಕ್ಷರಾದ ಜಯಮ್ಮ ನೀಲಗುಂದ ತಿಳಿಸಿದ್ದಾರೆ.

## ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ಶಿವಾನುಭವಗೋಷ್ಠಿ





ದಾವಣಗೆರೆ, ಏ. 4- ನಗರ ಸಮೀಪದ ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ 265ನೇ ದವನ ಹುಣ್ಣಿಮೆ ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 6ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಲಾಗಿದೆ.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ ವೀರೇಶ್ವರ ಪುಣ್ಯಾಶ್ರಮದ ಶ್ರೀ ಡಾ. ಕಲ್ಲಯ್ಯಜ್ಜನವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಯೋಗಿ ಸ್ವಾಮಿ ಉಪಸ್ಥಿತರಿರುವರು.

ಅಂದಿನ ಪ್ರಸಾದ ಸೇವೆಯನ್ನು ಮಲ್ಲಿಕಾರ್ಜುನ ಕೋಟೆ, ಡಾ.ಟಿ.ಜಿ. ನಿರಂಜನ್, ಪಾಲ ರಾಜಗುಪ್ತ, ಶ್ರೀಮತಿ ಪಿ.ಆರ್. ಶಾರದ ಮತ್ತು ಸಹೋದರರು ವಹಿಸಿಕೊಳ್ಳಲಿದ್ದಾರೆ.

## ಹೆಮ್ಮನಬೇತೂರಿನಲ್ಲಿ ನಾಳೆ ರಥೋತ್ಸವ



ದಾವಣಗೆರೆ ತಾಲ್ಲೂಕಿನ ಹೆಮ್ಮನ ಬೇತೂರು ಗ್ರಾಮದ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವ ನಾಳೆ ಗುರುವಾರ ಜರುಗಲಿದೆ. ಇಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಕಂಕಣ ಧಾರಣೆ ಹಾಗು ಶ್ರೀ ಮರುಳಸಿದ್ದೇಶ್ವರ ಸ್ವಾಮಿ ಸಣ್ಣ ರಥೋತ್ಸವವು ನಡೆಯುವುದು.

ನಾಳೆ ಗುರುವಾರ ಸಂಜೆ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ದೊಡ್ಡರಥೋತ್ಸವವು ಜರುಗುವುದು. ದಿನಾಂಕ 7 ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಗೂಳಿ ಹೋರಿಯ ಬಹಿರಂಗ ಹರಾಜು ನಡೆಯುವುದು. ಅಂದು ಸಂಜೆ 4 ಕ್ಕೆ ನೀರು ಬಂಡಿ ಉತ್ಸವ ನಡೆಯುವುದು. ದಿನಾಂಕ 8 ರ ಶನಿವಾರ ಬೆಳಿಗ್ಗೆ 8 ಕ್ಕೆ ಓಕಳಿ ಕಾರ್ಯಕ್ರಮ ನಡೆಯಲಿದೆ.

## ದಾಖಲೆ ಇಲ್ಲದೇ ಸಾಗಿಸುತ್ತಿದ್ದ 2.28 ಲಕ್ಷ ಹಣ ಪೊಲೀಸರ ವಶ

ಹರಿಹರ, ಏ. 4- ನಗರದ ಹೊರವಲಯದ ಕುರುಬರಹಳ್ಳಿ ಚೆಕ್ ಪೋಸ್ಟ್ ಬಳಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 2 ಲಕ್ಷದ 28 ಸಾವಿರ ರೂಪಾಯಿ ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣೆ ಅಧಿಕಾರಿ ಉದಯ್ ಕಂಬಾರ ತಿಳಿಸಿದರು.

ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಗುತ್ತೂರು ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಕುರುಬರ ಹಳ್ಳಿ ಚೆಕ್ ಪೋಸ್ಟ್‌ನಲ್ಲಿ ಬೆಳಿಗ್ಗೆ ಹರಪನಹಳ್ಳಿ ಕಡೆಗೆ ಹೋಗುತ್ತಿದ್ದ, ಕೆಎ 17 ಇಕ್ಸ್ 762 8 ಮೋಟಾರು ವಾಹನವನ್ನು ತಪಾಸಣೆ ಮಾಡಿದಾಗ ಹೊಸಭರಂಪುರದ ಎಂ.ಬಿ. ರಾಮನಗೌಡ ಎಂಬುವವರು ದಾಖಲೆ ಇಲ್ಲದೇ ಹಣವನ್ನು ಸಾಗಿಸುತ್ತಿದ್ದರು. ತಪಾಸಣೆ ವೇಳೆ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿ ನಾಗರಾಜ್ ಡಿ.ಇ., ಪೊಲೀಸ್ ಸಿಬ್ಬಂದಿ ನೂರುಲ್ ಹುಸೇನ್ ಆರ್.ಜೆ. ಇತರರು ಇದ್ದರು.

## ನಿಟ್ಟೂರಿನಲ್ಲಿ ನಾಳೆ ರಥೋತ್ಸವ

ಹರಪನಹಳ್ಳಿ, ಏ. 4 - ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ ಶ್ರೀ ಗೋಧಿ ಗುಣಿ ಬಸವೇಶ್ವರ ಸ್ವಾಮಿಯ ರಥೋ ತ್ಸವವು ನಾಡಿದ್ದು ದಿನಾಂಕ 6ರ ಗುರು ವಾರ ನಡೆಯಲಿದೆ. ನಾಳೆ ಸಂಜೆ 4 ಕ್ಕೆ ಗೋಧಿ ಗುಣಿ ಬಸವೇಶ್ವರ ಸ್ವಾಮಿಯ ರಥೋತ್ಸವ ಜರುಗುವುದು ಎಂದು ಭಕ್ತ ಮಂಡಳಿಯ ಪರವಾಗಿ ಎತ್ತಿನಹಳ್ಳಿ ರುದ್ರೇಶ್ ತಿಳಿಸಿದ್ದಾರೆ.

## ಏಷ್ಯನ್ ವಿಭಾಗದಲ್ಲಿ ವಿರಾಟಪುರದ ವಿರಾಗಿ 3ನೇ ಅತ್ಯುತ್ತಮ ಸಿನಿಮಾ ಪ್ರಶಸ್ತಿ




ಬೆಂಗಳೂರು, ಏ.4- 14ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ವಿಧಾನಸೌಧದ ಬಾಂಕ್ವೆಟ್ ಹಾಲ್ ನಲ್ಲಿ ಮೊನ್ನೆ ನಡೆಯಿತು.

ಕನ್ನಡ ವಿಭಾಗದಲ್ಲಿ ಅತ್ಯುತ್ತಮ ಚಿತ್ರವಾಗಿ ನಾನು ಕುಸುಮ, ಹದಿನೇಳೆಂಟು ದ್ವಿತೀಯ ಹಾಗೂ ಫೋಟೋ ತೃತೀಯ ಸ್ಥಾನವನ್ನು ಪಡೆದುಕೊಂಡಿದೆ.

ಏಷ್ಯನ್ ವಿಭಾಗದಲ್ಲಿ ವಿರಾಟಪುರದ ವಿರಾಗಿ ಮೂರನೇ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಪಡೆದುಕೊಂಡಿದ್ದು, ಇಂಡೋನೇಷ್ಯಾದ ಬಿಫೋರ್ ನೌ ಅಂಡ್ ದೆನ್ ಮೊದಲ ಅತ್ಯುತ್ತಮ ಪ್ರಶಸ್ತಿ ಪಡೆದಿದೆ.

ಉಳಿದಂತೆ ಏಷ್ಯನ್ ಸಿನಿಮಾ ಸ್ಪರ್ಧೆಯ ವಿಶೇಷ ಜ್ಯೂರಿ ವಿಭಾಗದಲ್ಲಿ ಇನ್ ಸಿನಿಮಾ, ಚಿತ್ರಭಾರತಿ ಭಾರತೀಯ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಕೋಳಿ ಎಸರು ಅತ್ಯುತ್ತಮ ಭಾರತೀಯ ಸಿನಿಮಾ ಪ್ರಶಸ್ತಿ ಪಡೆದುಕೊಂಡಿವೆ.

## ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ವಿಶೇಷ ಪೂಜೆ



ದಾವಣಗೆರೆ, ಏ. 4- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನ ಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 6 ರ ಗುರುವಾರ ದವನದ ಹುಣ್ಣಿಮೆ ಪ್ರಯುಕ್ತ ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನ ಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಶ್ರೀಮತಿ ಲಕ್ಷ್ಮೀ ರಾಜೇಶ್ ಮತ್ತು ಸಹೋದರರು ಹಾಗೂ ಸಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

STAFF REQUIRED
Nursing Staff - 10 No. Duty Doctor - 4 No.
ICU Staff - 6 No. Aaya - 6 No.
SUCHETHANA HOSPITAL
No. 284/1,2,3, 4th main Road, Opp. Vishweshwaraiah Park Gate, P.J. Extension, Davangere - 577 002.
08192 230203, +91 9742733116, 8095997444

# ನಿಸ್ವಾರ್ಥ ಸೇವೆ ಮಾಡುವವರಿಗೆ ಶಕ್ತಿ ತುಂಬಬೇಕಿದೆ



**ಸಂಕಲ್ಪ ಸೇವಾ ಫೌಂಡೇಷನ್ ಏರ್ಪಡಿಸಿದ್ದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆಯಲ್ಲಿ ಪಾಲಿಕೆ ಸದಸ್ಯ ಬಿ.ಜಿ. ಅಜಯ್ ಕುಮಾರ್**

ದಾವಣಗೆರೆ, ಏ. 4- ಒತ್ತಡದ ಕೆಲಸಗಳ ನಡುವೆಯೂ ನಿಸ್ವಾರ್ಥ ಸೇವೆ ಮಾಡುವವರಿಗೆ ಶಕ್ತಿ ತುಂಬಿ, ಪ್ರೋತ್ಸಾಹಿಸಬೇಕು ಎಂದು ಮಹಾನಗರ ಪಾಲಿಕೆ ಸದಸ್ಯ ಬಿ.ಜಿ. ಅಜಯ್ ಕುಮಾರ್ ಕರೆ ನೀಡಿದರು.

ಸಂಕಲ್ಪ ಸೇವಾ ಫೌಂಡೇಷನ್ ವತಿಯಿಂದ ನಗರದ ಶಿವಯೋಗಾಶ್ರಮದ ಆವರಣದಲ್ಲಿ ಕಳೆದ ವಾರ ಹಮ್ಮಿಕೊಳ್ಳಲಾಗಿದ್ದ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಸ್ಮರಣಾರ್ಥ ಹಾಗೂ ಕರ್ನಾಟಕ ರತ್ನ ಪುನೀತ್ ರಾಜ್ ಕುಮಾರ್ ಅವರ ಜನ್ಮದಿನದ ಪ್ರಯುಕ್ತ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ, ಸಂಗೀತ ಸಂಜೆ ರಸಮಂಜರಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಗರದಲ್ಲಿ ಹೆಚ್ಚಿನ ಶ್ರೀಮಂತರಿದ್ದಾರೆ. ಆದರೆ ಕೆಲವರಿಗೆ ಮಾತ್ರ ದಾನ ಮಾಡುವ ಗುಣವಿರುತ್ತದೆ. ನಾವು ಮಾಡುವ ಚಿಕ್ಕ ಧನ ಸಹಾಯ ಬಡ ಮಕ್ಕಳ ವಿದ್ಯಾಭ್ಯಾಸ, ಜೀವನಕ್ಕೆ ಸಾಕಷ್ಟು ಅನುಕೂಲವಾಗುತ್ತದೆ. ಆದ್ದರಿಂದ ದಾನ ಮಾಡುವ ಹಾಗೂ ಸೇವಾ ಮನೋಭಾವವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿರುವ ಹಿರಿಯ ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 1964ರಲ್ಲಿ ಡಿ.ಎಂ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಎಂಟಾಣೆ ಶುಲ್ಕ ಕಟ್ಟಬೇಕಾಗಿತ್ತು. ಅದಕ್ಕೆ ನಾಲ್ಕಾಣೆ ಸ್ಕಾಲರ್ ಶಿಪ್‌ಗಾಗಿ ಅರ್ಜಿ ಸಲ್ಲಿಸಿದ್ದೆ. ಅದು ಅಂದು ಅನಿವಾರ್ಯವೂ ಆಗಿತ್ತು. ಸ್ಕಾಲರ್ ಶಿಪ್ ಸಿಕ್ಕಾಗ ಪ್ರಪಂಚವನ್ನೇ ಗೆದ್ದ ಖುಷಿಯಾಗಿತ್ತು. ಸ್ಕಾಲರ್ ಶಿಪ್ ನೆರವಿನಿಂದಲೇ ಎಸ್ಸೆಸ್ಸೆಲ್ಸಿ ವರೆಗೂ ವಿದ್ಯಾಭ್ಯಾಸ ಮುಂದುವರೆಸಿದ್ದಾಗಿ ಅಥಣಿ ವೀರಣ್ಣ ನೆನಪಿಸಿಕೊಂಡರು. ಮೂರು ವಿದ್ಯಾರ್ಥಿಗಳಿಗೆ ತಲಾ ಐದು ಸಾವಿರ ರೂ. ಸ್ಕಾಲರ್ ಶಿಪ್ ಕೊಡುವುದಾಗಿ ಇದೇ ಸಂದರ್ಭದಲ್ಲಿ ಅಥಣಿ ವೀರಣ್ಣ ಹೇಳಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಸಂಕಲ್ಪ ಸೇವಾ ಫೌಂಡೇಷನ್ ಮಹಾ ಪೋಷಕ ಹೆಚ್.ಎನ್. ಮಲ್ಲಿಕಾರ್ಜುನಪ್ಪ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ದೇವರಮನೆ ಶಿವಕುಮಾರ್, ಸಂಕಲ್ಪ ಸೇವಾ ಫೌಂಡೇಷನ್ ಅಧ್ಯಕ್ಷ ಜಿ.ಮಹಾಂತೇಶ್, ಹಿರಿಯ ಯೋಗ ಶಿಕ್ಷಕ ಕೆ.ಕರಿಬಸಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಂ.ದಾರುಕೇಶ್, ಮಹಾನಗರ ಪಾಲಿಕೆ ಸದಸ್ಯ ಕೆ.ಪ್ರಸನ್ನಕುಮಾರ್, 'ಜನತಾವಾಣಿ' ಸಹ ಸಂಪಾದಕ ಇ.ಎಂ. ಮಂಜುನಾಥ, ಉದ್ಯಮಿ ಅಂಬರ್‌ಕರ್ ರಮೇಶ್, ಅಭಿ ಕಾಟನ್ ಮಾಲೀಕ ಬಕ್ಕೇಶ್, ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್ ಹಾಗೂ ಇತರರು ಉಪಸ್ಥಿತರಿದ್ದರು.

ಹಾಲೇಶ್ ಪ್ರಾರ್ಥಿಸಿದರು. ಕರಿಬಸಪ್ಪ ತಂಡದವರು ಓಂಕಾರ ಹೇಳುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅನಿಲ್ ರಾಯ್ಕರ್ ಸ್ವಾಗತಿಸಿದರು. ಸಿಂಚನ ವರ್ಣೇಕರ್ ನಿರೂಪಿಸಿದರು.


SPARSH HOSPITAL
THE TOUCH OF LIFE
ನಿಮ್ಮ ಕಾಲುಗಳ ಮೇಲಿನ ಕಾಳಜಿ ಕಡಿಮೆಯಾಗದಿರಲ್ಲಿ
ಸ್ಪರ್ಶ್ ಆಸ್ಪತ್ರೆ
ಉಬ್ಬಿರುವ ರಕ್ತನಾಳಗಳ ಚಿಕಿತ್ಸಾ ಕ್ಲಿನಿಕ್
ಡಾ. ಭಾಸ್ಕರ್ ಎಂ.ವಿ
MD (RD), DNB(RD), DM(NIR), FRCR(UK), MNAMS
ವಿಶೇಷತೆಗಳು – ನರವಿಜ್ಞಾನ ವಿಕಿರಣಶಾಸ್ತ್ರ
ಈ ಕ್ಲಿನಿಕ್‌ಗೆ ಯಾರು ಭೇಟಿ ನೀಡಬಹುದು?
ಕಾಲಿನಲ್ಲಿ ನೋವು । ರಕ್ತನಾಳದ ಊತ ಕಾಣಿಸಿಕೊಂಡಲ್ಲಿ । ಕಪ್ಪು ಚುಕ್ಕೆಗಳು । ತುರಿಕೆ ।
ವಾಸಿಯಾಗದ ನರದ ಹುಣ್ಣು । ಆಯಾಸ ಮತ್ತು ಹೆಚ್ಚಿನ ತೂಕವಿದ್ದವರು
ಎಂಡೋವ್ಯಾಸ್ಕುಲಾರ್ ವೈದ್ಯರೊಂದಿಗೆ ಸಮಾಲೋಚನೆ ₹ 300/-*
6ನೇ ಏಪ್ರಿಲ್ 2023 ಪ್ರತಿ ತಿಂಗಳು 1ನೇ ಗುರುವಾರ ಲಭ್ಯವಿದೆ
ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ – 577 002
ನೋಂದಣಿಗಾಗಿ ಕರೆಮಾಡಿ: +91 99800 33277
*T & C Apply

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte